ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 ಸಂಚಿಕೆ 31
೧ ಜೂನ್ ೧೯೫೮
*
ಪುಟ ೧೦ ಬೆಲೆ: ೧೩ ನಯೇ ಪೈಸೆ

ಮುಖ್ಯ ಮಂತ್ರಿ ಬಿ. ಡಿ. ಜತ್ತಿಯವರಿಗೆ

ಬಹಿರಂಗ ಪತ್ರ

ಎನ್. ಕೆ. ಉಪಾಧ್ಯಾಯ

ನೀವು ಮೈಸೂರು ರಾಜ್ಯದ ಮುಖ್ಯ ಮಂತ್ರಿಯಾಗಿ ಆರಿಸಿ ಬಂದಿರುತ್ತೀರಿ. ಹೊಸತಾಗಿ ರೂಪುಗೊಂಡ ನಮ್ಮ ಪ್ರಾಂತಕ್ಕೆ ಬಲಿಷ್ಟವಾದ ಸರಕಾರ ಬೇಕಾಗಿತ್ತು. ಏಕೆಂದರೆ ನವಮೈಸೂರು ರಾಜ್ಯದ ಮುಂದೆ, ಹಲವಾರು ಬಿಕ್ಕಟ್ಟಿನ ಪ್ರಶ್ನೆಗಳಿವೆ. ಕನ್ನಡನಾಡಿನ ಬೇರೆ ಬೇರೆ ಭಾಗದ ಜನರ ಹಲವಾರು ಬೇಡಿಕೆಗಳಿವೆ. ನಮ್ಮ ನಾಡಿನ ಅಭಿವೃದ್ಧಿಯಾಗಬೇಕಾಗಿದೆ. ಇಂಥ ನಿಕಟವಾದ ಪ್ರಶ್ನೆಗಳನ್ನು ಎದುರಿಸಬೇಕಾದರೆ, ಯೋಗ್ಯ ಸ್ಥಿರವಾದ ಸರಕಾರ ಬೇಕು. ಆದರೆ ಕಾಂಗ್ರೆಸ್ಸಿನಲ್ಲಿ. ಜಾತೀಯ ಭಾವನೆ, ಅಧಿಕಾರ ಲಾಲಸೆ, ಒಳಗುಂಪು ಜಗಳ ಮೊದಲಾದ ವಿಘಾತುಕ ವಿಚಾರ ಸರಣಿ ಮತ್ತು ಭಾವನೆಗಳು ತುಂಬಿ ತುಳುಕುತ್ತಿರುವುದರಿಂದ ನಿಜಲಿಂಗಪ್ಪನವರ ಮಂತ್ರಿಮಂಡಲ ಉರುಳಿ, ಆ ಸ್ಥಾನದಲ್ಲಿ ನೀವು ಮುಖ್ಯ ಮಂತ್ರಿಗಳಾಗಿ ಆರಿಸಿ ಬರುವ ಸುಯೋಗ ಬಂತು. ನೀವು ಮುಖ್ಯ ಮಂತ್ರಿ ಪದಕ್ಕೆ ಆರಿಸಿ ಬಂದ ರೀತಿ ಜನತೆಯ ಮನಸ್ಸಿಗೆ ಬರಲಿಲ್ಲ. ನಿಜಲಿಂಗಪ್ಪನವರು ಸಜ್ಜನರೂ ನೀತಿವಂತರೂ ಇದ್ದರೂ ಕೂಡ ಅವರಲ್ಲಿ ಆಡಳಿತೆ ನಡೆಸಲಿಕ್ಕೆ ಬೇಕಾದ ಗುಣಗಳಿದ್ದಿಲ್ಲ. ನೀವು ಮೊರಾರ್ಜಿ ದೇಸಾಯರ ಜೊತೆಯಲ್ಲಿ ಆಡಳಿತೆಯಲ್ಲಿದ್ದವರಾಗಿದ್ದೀರಿ. ನಿಮ್ಮ ಆಡಳಿತೆಯ ಅನುಭವ ಕರ್ನಾಟಕದ ಜನರಿಗೆ ಎಷ್ಟು ದಿವಸ ಮತ್ತು ಯಾವ ರೀತಿಯಲ್ಲಿ ಉಪಯೋಗಕರವಾದೀತೆಂಬುದನ್ನು ಸ್ವಾನುಭವದಿಂದ ತಿಳಿದುಕೊಳ್ಳಬೇಕಾಗಿದೆ. ಯಾಕಂದರೆ ನಿಮ್ಮೊಳಗಿನ ಗುಂಪು ಜಗಳವಿನ್ನೂ ದೂರವಾಗಲಿಲ್ಲ. ಮಂತ್ರಿಮಂಡಲದಲ್ಲಿ ಸ್ಥಾನ ಸಿಗದವರು ಅಧಿಕಾರ ಲಾಲಸೆಯಿಂದ, ನಿಮ್ಮಲ್ಲಿ ಒಡಕು ಹುಟ್ಟಿಸಿ, ಆಡಳಿತೆ ಸರಿಯಾಗಿ ನಡೆಯದಂತೆ ಆತಂಕ ಒಡ್ಡುವುದರಲ್ಲಿ ಸಂಶಯವಿಲ್ಲ. ಆಡಳಿತೆ ಸುಲಲಿತವಾಗಿ ನಡೆಯಬೇಕಾದರೆ, ಕಾಂಗ್ರೆಸ್ ಸಂಸ್ಥೆಯಲ್ಲಿರುವ, ಜಾತೀಯವಾದಿಗಳನ್ನೂ, ಅಧಿಕಾರ ಲಾಲಸಿಗಳನ್ನೂ, ದುರಭಿಮಾನಿಗಳನ್ನೂ ಹೊರಗೆ ಹಾಕದೇ ವಿಧಿಯಿಲ್ಲ. ಇದು ಮಾಡುತ್ತೀರಾ?

ನೀವು ಮುಖ್ಯ ಮಂತ್ರಿಗಳಾಗಿ ಆರಿಸಿ ಬಂದಿರುವುದರಿಂದ ಆಡಳಿತೆ ಸಂಬಂಧ ಕೆಲವು ವಿಷಯಗಳನ್ನು ಅವಲೋಕನೆಯ ಸಲುವಾಗಿ ನಿಮ್ಮ ಮುಂದೆ ಇಡಬೇಕೆಂದು ಇಚ್ಛಿಸುತ್ತೇನೆ.

ನಿಮ್ಮ ರಾಜ್ಯದ ಆಡಳಿತೆ ನಿರ್ಬಲ ಮತ್ತು ನಿಷ್ಕ್ರಿಯವಾಗಿದೆ. ಬೆಂಗಳೂರಿನ ಅತಾರಾ ಕಚೇರಿಯಿಂದ ಹಿಡಿದು, ಹಳ್ಳಿಯ ಗೌಡರ ಚಾವಡಿ ತನಕ ವಸೂಲಿ-ಬಾಕಿ, ಲಂಚಗೊಳಿತನಗಳು ನಾಟ್ಯವಾಡುತ್ತಿದ್ದು, ಜನತೆಗೆ ನ್ಯಾಯವೇ ಸಿಗದಂತಾಗಿದೆ. ಮೇಲಿನಿಂದ ಹಿಡಿದು ಕೆಳಗಿನ ತನಕ ಆಡಳಿತೆಯಲ್ಲಿಯ ದುರ್ಬಲತೆಯಿಂದಾಗಿ, ಸಾರ್ವಜನಿಕ ತಕರಾರುಗಳು ಮೂಲೆಗೊತ್ತಲ್ಪಡುತ್ತಿವೆ. ವೇಳೆಗೆ ಸರಿಯಾಗಿ ಸಾರ್ವಜನಿಕ ಅರ್ಜಿಗಳ ವಿಚಾರಣೆಯಾಗುವುದಿಲ್ಲ. ತಡವಾಗಿ ವಿಚಾರಣೆಯಾದರೂ ನ್ಯಾಯ ಸಿಗುವುದಿಲ್ಲ. ಲಂಚಗುಳಿತನ ಅತಿ ಕೈ ಮಟ್ಟಕ್ಕೆ ಳಿದಿದೆ. ಇವುಗಳೆಲ್ಲ ದೂರವಾಗಿ, ಆಡಳಿತೆಯಲ್ಲಿ ಯೋಗ್ಯ ಸುಧಾರಣೆಯಾಗಬೇಕು. ಅತಾರಾ ಕಚೇರಿಯಲ್ಲಿ ಮೂಲಭೂತ ಬದಲಾವಣೆಯಾಗಿ, ಮುಖ್ಯ ಸ್ಥಾನಗಳಲ್ಲಿ ಅನುಭವಸ್ಥ ಅಧಿಕಾರಿಗಳನ್ನು ನೇಮಿಸಬೇಕು. ಅತಾರ ಕಛೇರಿ, ಹಳೇ ಮೈಸೂರು ಸಂಸ್ಥಾನದ ಆಡಳಿತೆಯ ವಾತಾವರಣದಿಂದ ಬಿಡುಗಡೆ ಹೊಂದಿಲ್ಲೆಂದು ಜನರು ತಕರಾರು ಮಾಡುತ್ತಿರುವರು. ನೌಕರದಾರರಲ್ಲಿರುವ "ಜೀ ಹುಜೂರ" ಭಾವನೆಯನ್ನು ತೆಗೆದು ಹಾಕಿ, ಹೆಚ್ಚಿನ ನಿಷ್ಠೂರತೆಯಿಂದ ತಮ್ಮ ಕರ್ತವ್ಯ ಮಾಡುವಂತೆ ನೈತಿಕ ಶಕ್ತಿಯನ್ನು ಅತಾರಾ ಕಚೇರಿಯ ನೌಕರದಾರರಲ್ಲಿ ತುಂಬುವಂತೆ ಮಾಡಬೇಕು. ಉತ್ತರ ಕರ್ನಾಟಕದ ಒಬ್ಬ ಕಾರಕೂನರ ಅನುಭವ, ಮತ್ತು ಶೀವಿ, ಅತಾರಾ ಕಚೇರಿಯ ಮೇಲಾಧಿಕಾರಿಗಳಲ್ಲಿಲ್ಲವೆಂದು ಹೇಳುತ್ತಿರುವರು. ಈ ಅಪವಾದ ದೂರಾಗುವಂತೆ ಮಾಡಬೇಕು.

ಮಂತ್ರಿಮಂಡಲ ಮತ್ತು ಸರಕಾರಿ ಕಾರ್ಯದರ್ಶಿಗಳೊಳಗೆ ಒಮ್ಮತವಿಲ್ಲದಿರುವುದರಿಂದ, ಅಧಿಕಾರಿ ಜನರ ಬದ್ಲಿ ಹುಕುಮಗಳಲ್ಲಿ ತಾಳ ಮೇಳವಿಲ್ಲದಂತಾಗಿದೆ. ವರ್ಗಾ ವರ್ಗಿ ಹುಕುಮು ಹೊರಟ ಮರುದಿವಸವೇ ಅವುಗಳಲ್ಲಿ ಕೆಲವು ರದ್ದುಪಡಿಸಲ್ಪಡುತ್ತಿವೆ. ವರ್ಗಾಯಿಸಲ್ಪಟ್ಟ ಅಧಿಕಾರಿ ರಹದಾರಿಯಲ್ಲಿದ್ದಾಗಲೇ ಅವನನ್ನೇ ಮತ್ತೊಂದು ಕಡೆಗೆ ವರ್ಗಾಯಿಸಿದ ಹುಕುಮು ಕೊಡಲಾಗುತ್ತಿದೆ. ಅನುಭವಸ್ತ ಸೆಕ್ರೆಟರಿ ಇಲ್ಲದಿರುವುದು ಮತ್ತು ವಸೂಲಿಭಾಜಿಯೇ ಇದಕ್ಕೆ ಕಾರಣ. ಈ ರೀತಿ ತಾಸಿಗೊಂದು ಹುಕುಮು ಹೊರಡುತ್ತಿರುವುದರಿಂದ, ನೌಕರದಾರರಿಗೆ ಹಾನಿಯಾಗುವುದಷ್ಟೇ ಅಲ್ಲ, ಆಡಳಿತೆಯ ದುರ್ಬಲತೆಯನ್ನೂ ತೋರಿಸುತ್ತದೆ. ವರ್ಗಾವರ್ಗಿಯಲ್ಲಿಯ ಶಿಥಿಲತೆ ದೂರಾಗಬೇಕು.

ಮುಂಬಯಿಯಲ್ಲಿದ್ದಾಗ ನೀವು ಆರೋಗ್ಯ ಖಾತೆಯ ಮಂತ್ರಿಗಳಾಗಿದ್ದಿರಿ. ಈ ಖಾತೆಯಲ್ಲಿ ನಿಮಗೆ ಹೆಚ್ಚಿನ ಅನುಭವವಿದೆ. ಆರೋಗ್ಯ ಮತ್ತು ಮೆಡಿಕಲ್ ಖಾತೆಯಲ್ಲಿ ತಾಳ-ಮೇಳವಿಲ್ಲದಂತಾಗಿದೆ. ಜಿಲ್ಲೆಯ ಕೆಲವು ದವಾಖಾನೆಗಳು ಸಿವಿಲ್ ಸರ್ಜನರ ಕಕ್ಷೆಯೊಳಗೂ, ಕೆಲವು ಜಿಲ್ಲಾ ಆರೋಗ್ಯಾಧಿಕಾರಿಯ ಕಕ್ಷೆಯೊಳಗೂ, ಕೆಲವು ಜಿಲ್ಲಾ ಲೋಕಲ್ ಬೋರ್ಡಿನ ತಾಬೆಯೊಳಗೂ ಇರುತ್ತವೆ. ಇದರಿಂದಾಗಿ ಯೋಗ್ಯ ಮೇಲ್ವಿಚಾರಣೆ ಮತ್ತು ಸೇವೆ ಇಲ್ಲದಂತಾಗಿದೆ. ಇದರ ಪುನರ್ಘಟನೆಯಾಗಬೇಕು. ಸರಕಾರಿ ದವಾಖಾನೆಗಳಲ್ಲಿ ಸಾರ್ವಜನಿಕರಿಗೆ ಯೋಗ್ಯ ಔಷಧೋಪಚಾರ ಸಿಗುತ್ತಿಲ್ಲ. ಬಡವರನ್ನು ಉಲಕ್ಷ್ಯ ಮಾಡಲ್ಪಡುತ್ತಿದೆ. ಆದ ಕಾರಣ ಸರಕಾರಿ ದವಾಖಾನೆಗಳಲ್ಲಿ ಸಾರ್ವಜನಿಕರಿಗೆ ಯೋಗ್ಯ ಉಪಚಾರವಾಗುವ ವ್ಯವಸ್ಥೆಯಾಗಬೇಕು.

ಪೋಲೀಸ್ ಖಾತೆ ಶಿಥಿಲವಾಗಿದೆ. ಸಾರ್ವಜನಿಕರಿಗೆ ನ್ಯಾಯ ಸಿಗುತ್ತಿಲ್ಲ. ಪೋಲೀಸ್ ಅನ್ಯಾಯ ಅತ್ಯಾಚಾರಗಳೆಲ್ಲ ಮುಚ್ಚಲ್ಪಡುತ್ತಿದೆ. ಕೇರಳದ ಕಮ್ಯೂನಿಸ್ಟ್ ಸರಕಾರದವರು ಪೋಲೀಸ್ ಜನರ ಸಲುವಾಗಿ ಕೆಲವು ಸಾರ್ವಜನಿಕ ನೀತಿಯ ನಿಯಮಗಳನ್ನು ಮಾಡಿದಂತೆ, ನೀವಾದರೂ, ಪೋಲೀಸ್ ಖಾತೆಯ ಸುಧಾರಣೆ ಮಾಡಿ, ಈ ಖಾತೆಯಿಂದ ಸಾರ್ವಜನಿಕರಿಗೆ ನ್ಯಾಯ ಸಿಗುವಂತೆ ಮಾಡಬೇಕು.

ಒಕ್ಕಲತನ ಸುಧಾರಣೆಯ ಸಲುವಾಗಿ ನೀವೇ ಕೆಲವು ಶಿಫಾರಸುಗಳನ್ನು ಮಾಡಿದ್ದು, ಇದಕ್ಕಿಂತಲೂ ಹೆಚ್ಚಿಗೆ ಪ್ರಗತಿಪರವಾದ ಕಾಯಿದೆಯನ್ನು ನೀವು ತಡಮಾಡದೆ ಮಂಜೂರು ಮಾಡಿ, ಕರ್ನಾಟಕದ ರೈತ ಜನಾಂಗಕ್ಕೆ ಹಿತ ಮಾಡಬೇಕಾಗಿದೆ. ಇಡೀ ಕರ್ನಾಟಕಕ್ಕೆ ಏಕರೂಪಕವಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಕಾಯಿದೆ, ನಗರ ಸಭೆಗಳ ಕಾಯಿದೆಗಳನ್ನು ಆದಷ್ಟು ಶೀಘ್ರವಾಗಿ ಮಂಜೂರು ಮಾಡುವ ಕ್ರಮ ಕೈಗೊಳ್ಳಬೇಕಾಗಿದೆ.

ಉತ್ತರ ಕರ್ನಾಟಕ, ಹೈದರಾಬಾದು ಕರ್ನಾಟಕಗಳ ಪ್ರದೇಶಗಳಲ್ಲಿ ಅಪಾರವಾದ ಖನಿಜ ಸಂಪತ್ತುದಳಿದ್ದರೂ, ಈ ಸಂಪತ್ತುಗಳ ಪರಿಶೀಲನೆ ಮಾಡಿ, ಇವುಗಳ ಉಪಯೋಗ ಪಡೆಯುವ ಯಾವುದೇ ಕಾರ್ಯಕ್ರಮ ಸರಕಾರದವರು ಕೈಗೊಂಡಿಲ್ಲ. ಕರ್ನಾಟಕದ ಖನಿಜಸಂಪತ್ತಿನ ಉಪಯೋಗ ಮಾಡಿಕೊಳ್ಳುವ ಯೋಗ್ಯ ಕ್ರಮಗಳನ್ನು ನೀವು ಕೂಡಲೇ ಕೈಗೊಳ್ಳಬೇಕು. ಇದರಿಂದ ನಮ್ಮ ರಾಜ್ಯದ ಅಭಿವೃದ್ಧಿಯಾಗುವುದಷ್ಟೇ ಅಲ್ಲ, ನಮ್ಮಲ್ಲಿಯ ನಿರುದ್ಯೋಗತನವನ್ನು ದೂರ ಮಾಡಲಿಕ್ಕೂ ಸಹಾಯಕವಾದಂತಾಗುತ್ತದೆ.

● ನಮ್ಮಲ್ಲಿಯ ವಿಶಾಲವಾದ ಮಲೆನಾಡಿನಲ್ಲಿ ನೈಸರ್ಗಿಕ ಸಂಪತ್ತು ತುಂಬಿದ್ದು, ಇದನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ, ಮಲೆನಾಡಿನ ಅಭಿವೃದ್ಧಿಯಾಗಲಿಕ್ಕೆ ತೀವ್ರ ಕ್ರಮ ಕೈಗೊಳ್ಳಬೇಕಾಗಿದೆ. ಇದರ ಕುರಿತು ನಿಜಲಿಂಗಪ್ಪನವರಿಗೆ ಹೆಚ್ಚಿನ ಅನುಭವ ಮತ್ತು ಆಸ್ಥೆಯಿದ್ದರೂ ಕೂಡ, ಇದರ ಕಡೆ ಅವರು ತಮ್ಮ ಅಧಿಕಾರಾವಧಿಯಲ್ಲಿ ಹೆಚ್ಚಿನ ಲಕ್ಷ್ಯ ಹಾಕದಿರುವ ಕಾರಣ ತಿಳಿಯಲಿಲ್ಲ. ಕನ್ನಡಿಗರ ಬಡತನ ದೂರವಾಗಿ, ಆರ್ಥಿಕಾಭಿವೃದ್ಧಿಯಾಗಬೇಕಾದರೆ, ಮಲೆನಾಡಿನ ನೈಸರ್ಗಿಕ ಸಂಪತ್ತಿನ ಬೆಳವಣಿಗೆಯಾಗಲೇ ಬೇಕು.

● ಬಿಜಾಪುರ, ಧಾರವಾಡದಲ್ಲಿ ಅರಿವೆ ಮತ್ತು ನೂಲಿನ ಗಿರಣಿ, ಸೊಂಡೂರ, ಧಾರವಾಡದಲ್ಲಿ ಕಬ್ಬಿಣದ ಕಾರ್ಖಾನೆ ಮತ್ತಿನ್ನಿತರ ಉದ್ಯೋಗ ದಂಧೆಗಳು ರಚಿಸಲ್ಪಡಬೇಕಾಗಿದೆ. ವಿಲೀನವಾದ ಪ್ರದೇಶಗಳೆಲ್ಲ ಉದ್ಯೋಗ — ಕೈಗಾರಿಕೆಗಳಲ್ಲಿ ಹಿಂದುಳಿದಿದ್ದು, ನಮ್ಮ ರಾಜ್ಯ ಆರ್ಥಿಕ ದೃಷ್ಟಿಯಿಂದ ಭದ್ರವಾಗಬೇಕಾದರೆ, ಈ ಪ್ರದೇಶಗಳಲ್ಲಿ ದೊಡ್ಡ ಉದ್ಯೋಗಗಳು ರಚಿಸಲ್ಪಡಲೇ ಬೇಕು.

● ವಿಲೀನವಾದ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಸರಿಯಾಗಿ ಒದಗಿಸಲ್ಪಡುತ್ತಿಲ್ಲ. ಉತ್ತರ ಕರ್ನಾಟಕ, ಅದರಲ್ಲೂ ಬಿಜಾಪುರದಂಥ ಜಿಲ್ಲೆಗಳಲ್ಲಿ ವಿದ್ಯುತ್ತ ಪೂರೈಕೆ ಬಹಳ ಹಾಸ್ಯಾಸ್ಪದವಾಗಿರುತ್ತದೆ. ಬಿಜಾಪುರ ಮತ್ತಿತರ ಪ್ರದೇಶಗಳಲ್ಲಿ ಯೋಗ್ಯ ರೀತಿಯ ವಿದ್ಯುತ ಪೂರೈಕೆಯಾಗುವಂತೆ ವ್ಯವಸ್ಥೆ ಮಾಡಬೇಕು.

● ನಿಜಲಿಂಗಪ್ಪನವರ ಮಂತ್ರಿಮಂಡಲದ ಕೂಲಿಗಾರ ಧೋರಣೆ ಏಕಪಕ್ಷೀಯವಾಗಿತ್ತು. ಕರ್ನಾಟಕದಲ್ಲಿರುವ ಕೈಗಾರಿಕೋದ್ಯಮಗಳಲ್ಲಿ ಹೆಚ್ಚಿನ ಉತ್ಪಾದನೆಯಾಗಬೇಕಾದರೆ, ಕೂಲಿಗಾರರು ಸಂತುಷ್ಟರಾಗಿರುವುದು ಅತ್ಯಾವಶ್ಯಕ. ಸರಕಾರ—ಮಾಲಕ—ಕೂಲಿಗಾರರೊಳಗಿನ ಸಂಬಂಧ ಎಲ್ಲರಿಗೂ ಹಿತಕರವಾಗುವ ರೀತಿಯಲ್ಲಿರಬೇಕು. ಈಗಿನ ಸರಕಾರ ಮಾಲಕರ ಪರವಾದ ಮತ್ತು ರಾಷ್ಟ್ರೀಯ ಕಾಂಗ್ರೆಸ್ಸಿನ ಕೂಲಿಗಾರ ಸಂಘಗಳ ಪರವಾದ

(೯ನೇ ಪುಟ ನೋಡಿ)

ರಾಷ್ಟ್ರೀಯ - ಅಂತರರಾಷ್ಟ್ರೀಯ

ಟಾಟಾ ಉಕ್ಕಿನ ಕಾರ್ಖಾನೆ ಮುಷ್ಕರ ಮುಕ್ತಾಯ

ಮೇ 12 ರಿಂದ ಆರಂಭವಾದ ಟಾಟಾ ಉಕ್ಕಿನ ಕಾರ್ಖಾನೆಯ ಮುಷ್ಕರವನ್ನು ಜೆಮ್‌ಷೆಡ್‌ಪುರ ಮಜೂರ ಸಂಘವು ಹಿಂತೆಗೆದುಕೊಂಡಿದೆ. ಮ್ಯಾನೇಜ್‌ಮೆಂಟಿನೊಂದಿಗೆ ಮಾತುಕತೆ ನಡೆಸಿ ವಿವಾದಗಳನ್ನು ಇತ್ಯರ್ಥಗೊಳಿಸಲು ಯತ್ನಿಸಲಾಗುತ್ತಿದೆ.

ಸರಕಾರದ ಮತ್ತು ಮಾಲಿಕರ ದಬ್ಬಾಳಿಕೆಯನ್ನು ಕಮ್ಯೂನಿಸ್ಟ್ ಪಕ್ಷದ ನಾಯಕರೂ ಎ. ಐ. ಟಿ. ಯು. ಸಿ. ಕಾರ್ಯದರ್ಶಿಗಳೂ ಆದ ಎಸ್. ಎ. ಡಾಂಗೆಯವರು ತೀವ್ರವಾಗಿ ಖಂಡಿಸಿದ್ದಾರೆ. ಟಿಸ್ಕೋ ಮ್ಯಾನೇಜ್‌ಮೆಂಟಿನವರು ನೇರವಾದ ಮಾತುಕತೆಗಳನ್ನು ನಡೆಸಿ ವಿವಾದ ಇತ್ಯರ್ಥಗೊಳಿಸಬೇಕೆಂದು ಒತ್ತಾಯ ಪಡಿಸಿದ್ದಾರೆ.

ಬಿಹಾರ ಸರಕಾರ ಕಮ್ಯೂನಿಸ್ಟ್ ಶಾಸನ ಸಭಾ ಸದಸ್ಯರಾದ ಶ್ರೀ ಕೇದಾರದಾಸ್‌ರವರನ್ನೂ ಮತ್ತು ಸಂಘದ ಇತರ ನಾಯಕರನ್ನು ಬಂಧಿಸಿದೆ.

ಶ್ರೀ ಡಾಂಗೆಯವರು ಜೆಮ್‌ಷೆಡ್‌ಪುರಕ್ಕೆ ಭೇಟಿಯಿತ್ತಿದ್ದಾಗ ಟಿಸ್ಕೋ ಮಾಲಿಕರು ಅವರಿಗೆ ಹೋಟೆಲಿನಲ್ಲಿ ಇಳಿದುಕೊಳ್ಳಲು ಸ್ಥಳ ದೊರಕದಂತೆ ಮಾಡಿದ್ದರು. ಅಲ್ಲದೆ ಡಾಂಗೆಯವರನ್ನು ಭೇಟಿಯಾಗಲು ಸಹ ನಿರಾಕರಿಸಿದ್ದಾರೆ. ಟಿಸ್ಕೋ ಮಾಲಿಕರ ಈ ಮೊಂಡು ವರ್ತನೆ ಖಂಡನೀಯವಾಗಿದೆ.

ಕೆಲಸಗಾರರ ನ್ಯಾಯವಾದ ಹೋರಾಟವನ್ನು "ಕಮ್ಯೂನಿಸ್ಟರ ದುಷ್ಕೃತ್ಯ" ಎಂದು ಅಲ್ಲಗಳೆಯಲು ಸರಕಾರ ಮತ್ತು ಮಾಲಿಕರು ಮುಂದೆ ಬಂದಿದ್ದಾರೆ. ಟಿಸ್ಕೋ ಕಾರ್ಮಿಕರ ದೃಢವಾದ ಐಕ್ಯತೆ ಈ ಅಪಪ್ರಚಾರ ಎಷ್ಟು ಸುಳ್ಳೆಂಬುದನ್ನು ತೋರಿಸಿಕೊಟ್ಟಿದೆ. ಟಿಸ್ಕೋದ ಮ್ಯಾನೇಜ್‌ಮೆಂಟಿನವರು ತಮ್ಮ ಮೊಂಡುತನವನ್ನು ಬಿಟ್ಟು ಕೆಲಸಗಾರರ ಸಂಘದೊಂದಿಗೆ ಮಾತುಕತೆಗಳನ್ನು ನಡೆಸಿ ವಿವಾದಗಳನ್ನು ಇತ್ಯರ್ಥಗೊಳಿಸಲಿ ಎಂದು ಒತ್ತಾಯ ಪಡಿಸುತ್ತೇವೆ.

ಸಿಲೋನ್ ಭಾಷಾ ಸಮಸ್ಯೆಯ ವಿಷಾದ ಘಟನೆ

ಕಳೆದ ಕೆಲವು ದಿನಗಳಲ್ಲಿ ಸಿಲೋನಿನಲ್ಲಿ ಅಧಿಕೃತ ಭಾಷಾ ಸಮಸ್ಯೆಯ ಬಗ್ಗೆ ಪರಸ್ಪರ ವಿರೋಧ ಪಂಥಗಳ ನಡುವೆ ತೀವ್ರವಾದ ಘಟನೆ ನಡೆದು ಸುಮಾರು 50 ಮಂದಿಗೂ ಹೆಚ್ಚು ಮಂದಿ ಮೃತರಾಗಿದ್ದಾರೆ. ಈ ಗಲಭೆಗಳಲ್ಲಿ ಗೂಂಡಾವೃತ್ತಿ ಹೆಚ್ಚು ನಡೆದು ಭಾರೀ ನಷ್ಟವಾಗಿರುವುದೇ ಅಲ್ಲದೆ, ಸಿಲೋನಿನಾದ್ಯಂತ ತರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ. ಸಿಲೋನಿನ ಸರಕಾರ ಫೆಡರಲ್ ಪಕ್ಷ ಮತ್ತು ಸಿನಾಲೀಸರ ಮತ್ತೊಂದು ಪಕ್ಷವನ್ನು ನ್ಯಾಯ ಬಾಹಿರವೆಂದು ಸಾರಲಾಗಿದೆ.

ಭಾಷಾ ಸಮಸ್ಯೆಯ ಬಗ್ಗೆ ಈ ರೀತಿಯಲ್ಲಿ ಭಾರೀ ಘರ್ಷಣೆ ನಡೆದು, ಸಂಕುಚಿತ ರೀತಿಯಲ್ಲಿ ಅಸಹ್ಯಕರವಾದ ಘಟನೆಗಳು ನಡೆದಿರುವುದು ವಿಷಾದಕರವಾಗಿದೆ. ಸಿಲೋನಿನಲ್ಲಿ ಪೂರ್ಣ ಶಾಂತಿ ಏರ್ಪಟ್ಟು ವಿವಾದಾಸ್ಪದವಾದ ಈ ಸಮಸ್ಯೆ ಸುಗಮವಾಗಿ ಬಗೆ ಹರಿಯಲಿ ಎಂದು ಹಾರೈಸುತ್ತೇವೆ.

ಪ್ರಜಾಸೋಷಲಿಸ್ಟರ ಸಮ್ಮೇಳನ

ಪೂನಾದಲ್ಲಿ ನಡೆದ ಪ್ರಜಾ ಸೋಷಲಿಸ್ಟ್ ಪಕ್ಷದ ಸಮ್ಮೇಳನವು ಎಂದಿನಂತೆ ಮುಕ್ತಾಯಗೊಂಡಿದೆ. ಕಾಂಗ್ರೆಸ್ಸನ್ನು ಬಿಟ್ಟರೆ ಅದಕ್ಕೆ ತಕ್ಕ ಪ್ರತಿಪಕ್ಷ ದೇಶದಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷ ಒಂದೇ ಎಂದು ಸಾರಿಕೊಂಡಿದೆ.

ಸಮ್ಮೇಳನದ ಕಾರ್ಯಕಲಾಪಗಳು ಮತ್ತು ತೀರ್ಮಾನಗಳನ್ನು ಪರಿಶೀಲಿಸಿದಲ್ಲಿ ಪಕ್ಷದಲ್ಲಿರುವ ಗೊಂದಲ ಎದ್ದು ಕಾಣುತ್ತದೆ. ದೃಢವಾದ ನೀತಿಯಿಲ್ಲದೆ ಒಂದೊಂದು ಪ್ರದೇಶಕ್ಕೆ ಒಂದೊಂದು ನೀತಿಯನ್ನು ಸಂದರ್ಭಕ್ಕನುಸಾರವಾಗಿ ಅನುಸರಿಸುವುದನ್ನು ಮತ್ತೊಮ್ಮೆ ಎತ್ತಿ ಹಿಡಿಯಲಾಗಿದೆ.

ಸಾಕಷ್ಟು ಕಮ್ಯೂನಿಸ್ಟ್ ವಿರೋಧೀ ಭಾಷಣಗಳನ್ನು ಮಾಡಿ ಸಮ್ಮೇಳನದಲ್ಲಿ ಅಶೋಕ ಮೆಹ್ತಾರಂಥ ನಾಯಕರು ತೃಪ್ತಿಪಟ್ಟುಕೊಂಡಿದ್ದಾರೆ. ಕಮ್ಯೂನಿಸ್ಟರೊಂದಿಗೇ ಆಗಲಿ ಕಾಂಗ್ರೆಸ್ಸಿನೊಂದಿಗೇ ಆಗಲಿ ಐಕ್ಯ ರಂಗದ ಪ್ರಶ್ನೆಯೇ ಇಲ್ಲವೆಂದು ಸಾರಲಾಗಿದೆ. ತಾವೇ ನಿಜವಾದ ಸಮಾಜವಾದಿಗಳೆಂದು, ದೇಶದ ಮುನ್ನಡೆಗೆ ದುಡಿಯುವವರು ತಾವೇ ಎಂದು ಹೇಳಿಕೊಂಡಿದ್ದಾರೆ. ಇದೆಲ್ಲ ಸರಿಯೆಂದು ಭಾವಿಸಿದರೂ, ಕಳೆದ ವರ್ಷಗಳಲ್ಲಿ ಪಕ್ಷದ ನೀತಿ ಏನಾಗಿದೆ ಎಂಬುದನ್ನು ಮರೆಯುವಂತಿಲ್ಲ.

ಒರಿಸ್ಸಾದಲ್ಲಿ ಪಾಳೆಯಗಾರೀ ಭೂಮಾಲಿಕರ ಪಕ್ಷವಾದ ಗಣತಂತ್ರ ಪರಿಷತ್ತಿನೊಂದಿಗೆ ಒಕ್ಕೂಟವನ್ನು ಈ ಸಮ್ಮೇಳನದಲ್ಲಿ ಎತ್ತಿಹಿಡಿಯಲಾಗಿದೆ. ಇದಕ್ಕೆ ಇತ್ತಿರುವ ಕಾರಣಗಳು ವಿಚಿತ್ರವಾಗಿವೆ. ಕಾಂಗ್ರೆಸ್ಸಿನೊಂದಿಗೆ ಸೇರಿಕೊಳ್ಳುವುದಿಲ್ಲವೆಂದು ಸಾರುತ್ತಿರುವ ಇವರು ಕೇರಳದಲ್ಲಿ ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಸರಕಾರದ ವಿರುದ್ಧ ಕಾಂಗ್ರೆಸ್ಸಿನೊಂದಿಗೇ ಅಲ್ಲದೆ ಜಾತೀಯವಾದಿ ಪಕ್ಷವಾದ ಮುಸ್ಲಿಂ ಲೀಗಿನೊಂದಿಗೂ ಚುನಾವಣೆಯಲ್ಲಿ ಒಪ್ಪಂದ ಮಾಡಿಕೊಳ್ಳಲಿಲ್ಲವೇ? ಇತ್ತೀಚೆಗೆ ದೇವೀಕುಲಂನಲ್ಲಿ ನಡೆದ ಉಪ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಉಮೇದುವಾರರನ್ನು ಸೋಲಿಸುವ ಯತ್ನದಲ್ಲಿ ಕಾಂಗ್ರೆಸ್ಸಿನೊಂದಿಗೆ, ಮುಸ್ಲಿಂ ಲೀಗಿನೊಂದಿಗೆ ಕೆಲಸ ಮಾಡಿರುವುದನ್ನು ಮರೆಯಲು ಸಾಧ್ಯವೇ ?

ಕಮ್ಯೂನಿಸ್ಟರೊಂದಿಗೆ ಐಕ್ಯಕಾರ್ಯಾಚರಣೆಗೆ ಸಾಧ್ಯವೇ ಇಲ್ಲವೆಂದು ಹೇಳುವ ಇವರಿಗೆ ಕಾರ್ಯರೂಪದಲ್ಲಿ ಅದನ್ನು ತರಲಾಗಿದೆಯೆ ಎಂಬುದನ್ನು ಪ್ರಶ್ನಿಸಬೇಕಾಗಿದೆ. ಪಶ್ಚಿಮ ಬಂಗಾಳದಲ್ಲಿ ಮಹಾರಾಷ್ಟ್ರ ಗುಜರಾತ್‌ಗಳಲ್ಲಿ ಕಮ್ಯೂನಿಸ್ಟರನ್ನು ಕಡೆಗಣಿಸಲು ಸಾಧ್ಯವಾಗಿಲ್ಲ ಎಂಬುದು ನಿದರ್ಶನವಾಗಿದೆ. ಇನ್ನಾದರೂ ಪ್ರಜಾ ಸೋಷಲಿಸ್ಟ್ ನಾಯಕರು ತಮ್ಮ ಮೊಂಡು ಕಮ್ಯೂನಿಸ್ಟ್ ವಿರೋಧಿ ನೀತಿಯನ್ನು ಬದಲಿಸಿ ಪಕ್ಷದ ಸಾಧಾರಣ ಸದಸ್ಯರ ಬಯಕೆಗೆ ತಲೆಬಾಗುವರೇ ?

ಫ್ರಾನ್ಸ್‌ನಲ್ಲಿ ಫಾಸಿಸ್ಟ್ ಡಿಗಾಲೆ ಸರ್ವಾಧಿಕಾರ!

ಆಲ್ಜೀರಿಯ ಬಿಕ್ಕಟ್ಟು ಫ್ರೆಂಚ್ ರಾಜಕೀಯದಲ್ಲಿ ತೀವ್ರಗೊಂಡು ಕೇವಲ ಕೆಲವೇ ದಿನಗಳು ಅಧಿಕಾರದಲ್ಲಿದ್ದ ಫ್ಲಿಮ್‌ಲಿನ್ ಸರಕಾರ ರಾಜೀನಾಮೆ ಸಲ್ಲಿಸಿ, ಫಾಸಿಸ್ಟ್ ಡಿಗಾಲೆ ಅಧಿಕಾರಕ್ಕೆ ಬರಲು ದಾರಿ ಮಾಡಿಕೊಟ್ಟಿದೆ. ಇದು ಯುದ್ಧಾನಂತರದಲ್ಲಿ ಫ್ರೆಂಚ್ ರಾಜಕೀಯದಲ್ಲಿ ಪ್ರಜಾ ಪ್ರಭುತ್ವದ ಮೇಲೆ ಸೈನ್ಯಪಡೆಗಳ ವಿಜಯವೆಂದು ಹೇಳಬಹುದಾಗಿದೆ. ಡಿಗಾಲೆಯವರು ಅಧಿಕಾರಕ್ಕೆ ಬರುವುದೆಂದರೆ ಪ್ರಜಾ ಪ್ರಭುತ್ವಕ್ಕೆ ತಿಲಾಂಜಲಿಯಿತ್ತು ಸರ್ವಾಧಿಕಾರ ಸ್ಥಾಪನೆಯಾದಂತೆಯೇ ಆಗಿದೆ.

ಡಿಗಾಲೆಯವರು ಅಧಿಕಾರಕ್ಕೆ ಬರುವುದರ ವಿರುದ್ಧ ಎಡ ಪಕ್ಷಗಳು—ಕಮ್ಯೂನಿಸ್ಟ್ ಪಕ್ಷ, ಸೋಷಲಿಸ್ಟ್ ಪಕ್ಷ ಮತ್ತಿತರ ಪಕ್ಷಗಳು ತೀವ್ರವಾಗಿ ವಿರೋಧಿಸಿವೆ. ಭಾರೀ ಪ್ರದರ್ಶನಗಳು ನಡೆದಿವೆ.

ಫ್ರಾನ್ಸ್ ಅಧ್ಯಕ್ಷ ರಿನೇಕೋಟಿಯವರು ಮೇ 29ರಂದು ಇತ್ತಿರುವ ಹೇಳಿಕೆಯಲ್ಲಿ "ಜನರಲ್ ಡಿಗಾಲೆಯವರ ನೇತೃತ್ವದಲ್ಲಿ ಸರಕಾರದ ರಚನೆಯಾಗಬೇಕು ಅಥವಾ ಅಂತರಿಕ ಯುದ್ಧವನ್ನು ಎದುರಿಸಬೇಕು. ಇದೇ ರಾಷ್ಟ್ರೀಯ ಸಭೆಯ ಸದಸ್ಯರ ಮುಂದಿರುವ ಸಮಸ್ಯೆ" ಎಂದು ಎಚ್ಚರಿಸಿದ್ದಾರೆ. ಅಲ್ಲದೆ ಡಿಗಾಲೆಯವರನ್ನು ಅಧಿಕಾರಕ್ಕೆ ತರುವುದು ಅಯಶಸ್ವಿಯಾದಲ್ಲಿ ತಾವು ಅಧ್ಯಕ್ಷ ಸ್ಥಾನವನ್ನು ತ್ಯಜಿಸುವುದಾಗಿ ತಿಳಿಸಿದ್ದಾರೆ. ಈಗಾಗಲೇ ಜನರಲ್ ಡಿಗಾಲೆಯವರು ಸರಕಾರ ರಚಿಸುವಂತೆ ಆಹ್ವಾನಿತರಾಗಿದ್ದಾರೆ.

ಡಿಗಾಲೆಯವರು ಫ್ರಾನ್ಸ್‌ನಲ್ಲಿ ಅಧಿಕಾರಕ್ಕೆ ಬರುವುದು ಖಚಿತವಾಗಿದೆ. ಇವರು ಅಧಿಕಾರಕ್ಕೆ ಬರುವುದರಿಂದ ಫ್ರಾನ್ಸ್‌ನಲ್ಲಿ ಅಂತರ್ಯುದ್ಧ ತಪ್ಪಿಸಲಾಗುವುದೇ ಎಂಬುದೇ ಪ್ರಶ್ನೆಯಾಗಿದೆ. ಸೇನಾಬಲದ ಇದಿರು ಪ್ರಜಾ ಪ್ರಭುತ್ವ ಇಂದು ತತ್ತರಿಸುತ್ತಿದೆ. ಈ ಚಾರಿತ್ರಿಕ ಹೋರಾಟದಲ್ಲಿ ಯಾರು ಯಶಸ್ವಿಯಾಗುತ್ತಾರೆಂದು ನೋಡಬೇಕಾಗಿದೆ. ಬಿಕ್ಕಟ್ಟಿನಲ್ಲಿ ತೊಳಲುತ್ತಿರುವ ಫ್ರೆಂಚ್ ರಾಜಕೀಯದಲ್ಲಿ ಫ್ರೆಂಚ್ ರಿಪಬ್ಲಿಕ್‌ನ ಅಸ್ತಿತ್ವವೇ ಬುಡ ಮೇಲಾಗುವ ಸಂಭವವಿದೆ. ಮುಂದಿನ ಕೆಲವು ದಿನಗಳಲ್ಲಿ ಫ್ರಾನ್ಸಿನ ರಾಜಕೀಯವು ವಿಶ್ವದ ರಾಜಕೀಯ ವಾತಾವರಣದ ಮೇಲೆ ಭಾರೀ ಪ್ರಭಾವವನ್ನು ಬೀರುವುದಿದೆ.

ಕೆ. ಸಿ. ಟಿ. ಯು. ಸಿ. ಕಾರ್ಯಕಾರಿ ಸಮಿತಿ ಸಭೆ

(೯ನೇ ಪುಟದಿಂದ)

ಖಾರ್ನೆ ಕೆಲಸಗಾರರನ್ನು ಅಭಿನಂದಿಸಿ ಅವರಿಗೆ ಬೆಂಬಲ ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಮೈಸೂರು ಸರಕಾರವು ಕಾರ್ಮಿಕ ಸಲಹಾ ಸಮಿತಿಯನ್ನು ರಚಿಸುವುದರಲ್ಲಿ ಐ. ಎನ್. ಟಿ. ಯು. ಸಿ.ಗೆ ಅಧಿಕ ಪ್ರಾತಿನಿಧ್ಯ ಕೊಟ್ಟು, ಎ. ಐ. ಟಿ. ಯು. ಸಿ ಗೆ ಸರಿಯಾದ ಪ್ರಾತಿನಿಧ್ಯ ಕೊಡದಿರುವುದನ್ನು ಮತ್ತು ಹಿಂದ್ ಮಜ್ದೂರ್ ಸಭಾ ಪ್ರಾತಿನಿಧ್ಯ ಕೊಡದಿರುವುದನ್ನು ಖಂಡಿಸುವ ಮತ್ತು ಈ ಸಮಿತಿಯನ್ನು ರಚಿಸುವುದರಲ್ಲಿ ಸರಕಾರದ ಕ್ರಮವನ್ನು ಪ್ರತಿಭಟಿಸುವ, ಎ.ಐ.ಟಿ.ಯು.ಸಿ.ಯ ಬಗ್ಗೆ ತೋರಿರುವ ಮಲತಾಯಿ ಧೋರಣೆಯನ್ನು ಖಂಡಿಸುವ, ಸರಕಾರ ಈ ಅಸಮರ್ಪಕವಾಗಿ ರಚಿಸಿರುವ ಸಮಿತಿಯನ್ನು ಪುನರ್‌ಪರಿಶೀಲಿಸಿ, ಮೂರು ಟ್ರೇಡ್ ಯೂನಿಯನ್ ಕೇಂದ್ರಗಳಿಗೂ ಸರಿಯಾದ ಪ್ರಾತಿನಿಧ್ಯ ಕೊಡುವ ರೀತಿಯಲ್ಲಿ ಸಮಿತಿಯನ್ನು ಪುನರ್ರಚಿಸಬೇಕೆಂದು ಒತ್ತಾಯ ಪಡಿಸುವ ನಿರ್ಣಯವನ್ನು ಅನುಮೋದಿಸಲಾಯಿತು.

ಸಭೆಯು, ಹೋರಾಡುತ್ತಿರುವ ಯಶವಂತಪುರದ ಫೈರ್‌ಬ್ರಿಕ್ಸ್ ಮತ್ತು ಪಾಟರೀಸ್ ಕೆಲಸಗಾರರಿಗೆ ಬೆಂಬಲವನ್ನು ಸೂಚಿಸಿ, ಸರಕಾರವು ಕೂಡಲೇ ಪ್ರವೇಶಿಸಿ, ಅನ್ಯಾಯವಾದ ಲಾಕ್‌ಔಟನ್ನು ತೆಗೆಸಬೇಕೆಂದೂ ಒತ್ತಾಯಪಡಿಸಲಾಯಿತು.

ಸಭೆಯು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

'ಜನಶಕ್ತಿ'
ಕಾಶೀ ವಿಶ್ವೇಶ್ವರ ಗುಡಿ ಬೀದಿ,
ಬೆಂಗಳೂರು ೨

ಪ್ರಗತಿಶೀಲ ಕನ್ನಡ ವಾರಪತ್ರಿಕೆಗೆ
ಇಂದೇ ಚಂದಾದಾರರಾಗಿರಿ

ಚಂದಾ ವಿವರ :

ವಾರ್ಷಿಕ ಚಂದಾ	ರೂ.	6—00
ಅರ್ಧ ವಾರ್ಷಿಕ	ರೂ.	3—00
ಬಿಡಿ ಪ್ರತಿ	13	ನಯಾಪೈಸಾ

ಕೇರಳ ಕಮ್ಯೂನಿಸ್ಟ್ ಸರಕಾರದ ಬಗ್ಗೆ ಒಂದು ಅಭಿಪ್ರಾಯ

ಗೌರೀಶ ಕಾಯ್ಕಿಣಿ

[ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರದ ಬಗ್ಗೆ ಹೆಸರಾಂತ ಕನ್ನಡ ಲೇಖಕ ಶ್ರೀ ಗೌರೀಶ ಕಾಯ್ಕಿಣಿಯವರು ಬರೆದಿರುವ ಈ ಲೇಖನವನ್ನು ಉತ್ತರ ಕರ್ನಾಟಕದ "ಜನಸೇವಕ" ವಾರ ಪತ್ರಿಕೆಯಿಂದ ಪ್ರಕಟಿಸಿದ್ದೇವೆ.] —ಸಂ.

★

"ನಿಮ್ಮ ಕಡೆಯ ಪತ್ರಿಕೆಗಳಲ್ಲಿ ಸರಿಯಾದ ಸಮಾಚಾರ ಬರುತ್ತಿಲ್ಲ. ಹೊರಗಿನವರು ಯಾರು ಏನೇ ಹೇಳಲಿ, ಸಧ್ಯ ಕೇರಳದಲ್ಲಿ ಒಳ್ಳೆಯ ಆಳಿಕೆ ನಡೆದಿದೆ. ಚೆನ್ನಾದ ಆಡಳಿತ ನೆಲಸಿದೆ. ಸರಕಾರ ಕಟ್ಟುವ ಮೊದಲು ಕಮ್ಯೂನಿಸ್ಟರು ಏನೇ ಆಡಿದ್ದರೂ ಅಂದಿದ್ದರೂ ಈಗ ಅವರ ರಾಜ್ಯ ಪ್ರಜೆಗಳ ವಿಶ್ವಾಸವನ್ನು ಗಳಿಸಿದೆ. ತುಂಬ ಹೊಣೆಗಾರಿಕೆ ಅರಿತು ಕಾರಭಾರ ಸಾಗಿಸುತ್ತಿದ್ದಾರೆ. ಮತ್ತೊಮ್ಮೆ ಚುನಾವಣೆಗಳನ್ನು ಗೆದ್ದು ಬಂದು ಕಮ್ಯೂನಿಸ್ಟ್ ಪಕ್ಷವೇ ಕೇರಳದಲ್ಲಿ ರಾಜ್ಯವಾಳಬೇಕು, ಆಳುವದು".

—ಹೀಗೆ ಉದ್ಗಾರ ತೆಗೆದವರು ಮುಷ್ಠಿ ಬಿಗಿದು ಕಿರುಚಿಕೊಳ್ಳುವ ಕೆಂಪು ಕಣ್ಣಿನ ಕೆದರಿದ ಕೂದಲಿನ ಚಳವಳಿಗಾರ ಕಾಮ್ರೇಡನಲ್ಲ! ಕಮ್ಯೂನಿಸ್ಟ್ ಪಕ್ಷದ ಅಥವಾ ಕೇರಳ ಸರಕಾರದ ಪ್ರಸಿದ್ಧಿ ವಿಭಾಗದ ಸುದ್ದಿಗಾರನೂ ಅಲ್ಲ. ಮೇಲಿನ ಅಭಿಪ್ರಾಯವನ್ನು ಶಾಂತವಾಗಿ ತೀರ ಮೃದುವಾದ ಮಾತಿನಲ್ಲಿ ಕಿರುದನಿಯಲ್ಲಿ ನನ್ನೊಡನೆ ಆಡಿದ ಮಹಾಶಯರು ಕೊಚ್ಚಿಯ ಒಬ್ಬ ಹೆಸರಾಂತ ವ್ಯಾಪಾರಿಗಳು. 60ರ ಗೆರೆ ದಾಟಿದ ನೇಮವಂತರು. ಮೊದಲೊಮ್ಮೆ 5-6 ವರ್ಷ ಕೊಚ್ಚಿಯ ನಗರಪಾಲಿಕೆಯ ಅಧ್ಯಕ್ಷರಾಗಿ ಸಾರ್ವಜನಿಕ ಚಟುವಟಿಕೆಗಳಲ್ಲಿ ಒಳಹೊಕ್ಕು ಬಳಕೆ ಉಳ್ಳವರು. ನರೆಗೂದಲಿನ ಒಬ್ಬ ಬಿ.ಎ;ಬಿ.ಎಲ್. ಪದವೀಧರ ವಕೀಲರು. ಆದರೆ ಮುಂದೆ ವಕೀಲಿಯನ್ನು ಬಿಟ್ಟುಕೊಟ್ಟು ಬಹು ದೊಡ್ಡ ಪ್ರಮಾಣದಲ್ಲಿ ನಿರ್ಯಾತ ವ್ಯಾಪಾರ ನಡೆಯಿಸುತ್ತ ಪ್ರತಿಷ್ಠೆ ಪ್ರಸಿದ್ಧಿ ಮತ್ತು ಸಂಪತ್ತನ್ನು ಸಂಪಾದಿಸಿದ ವಿಚಾರ ಶೀಲರು! ಕೇರಳದ ಕಮ್ಯೂನಿಸ್ಟ್ ಸರಕಾರ ಇಂಥ ಪ್ರತಿಷ್ಠಿತ ಧನಿಕ ವರ್ತಕ ವರ್ಗದವರ ಪ್ರಶಂಸೆಗೂ ಪಾತ್ರವಾಗಿದೆಯೆಂದ ಮೇಲೆ, ಕೆಂಪು ತಾರೆಯ ಬೆಳಕಿನಲ್ಲಿ ಕೇರಳದ ಈ ಬರೆಗಾಲಿನ ಪಾದಯಾತ್ರೆಯು ಎಷ್ಟೊಂದು ಯಶಸ್ವಿಯಾಗಿದೆ—ಎಂಬ ಸೋಜಿಗವನ್ನು ಅರಿತುಕೊಳ್ಳಬೇಡವೇ? ಕೊಚ್ಚಿಯಿಂದ ನಮ್ಮೂರ ಕಡೆಗೆ ಒಂದು ಮದುವೆಯ ನಿಮಿತ್ತವಾಗಿ ಆಗಮಿಸಿದ ಮೇಲೆ ಹೇಳಿದ ಈ ವಯೋವೃದ್ಧ ಸುವಿದ್ಯಾವರ್ತಕ ಮಹಾಶಯರೊಂದಿಗೆ ನಾನು ಕೇರಳದ ಕಮ್ಯೂನಿಸ್ಟ್ ಸರಕಾರದ ಒಂದು ವರ್ಷದ ಕಾರಭಾರದ ವಿಚಾರವಾಗಿ ಅಂಜುತ್ತ ಅಳುಕುತ್ತಲೇ ಪ್ರಶ್ನೆ ಹಾಕಿದೆ. ಆದರೆ ಈ ಜಾಣ ಜಾಂಬುವಂತರು ಸ್ವಲ್ಪವೂ ವಿಕಲ್ಪವಿಲ್ಲದೆ, ವಿಕಾರವಶರಾಗದೆ ನಂಬೂದ್ರಿಪಾದರ ಸರಕಾರವನ್ನು ಮುಕ್ತಕಂಠವಾಗಿ ಹೊಗಳಿದರು. ಕಮ್ಯೂನಿಸ್ಟ್ ಪಕ್ಷದವರಿಗೆ ರಾಜ್ಯ ಆಳುವದು ಹೇಗೆಂದು ಗೊತ್ತು, ಜನತೆಯ ಸೇವೆ ಹೇಗೆ ಮಾಡುವದೆಂಬುದು ಗೊತ್ತು. ಅವರದು ಬರೆ ಕಿಡಿಗೇಡಿ ಕಿಳ್ಳಿಕೇತರ ಉಪದ್ವ್ಯಾಪವಲ್ಲ,—ಎಂಬ ಅಭಿಪ್ರಾಯ ಆ ಮಹಾಶಯರು—ಅವರು ಮತ್ತೆ ಶುದ್ಧ ಗಾಂಧೀ—ನೆಹರೂ ಭಕ್ತರು!—ವ್ಯಕ್ತಮಾಡಿದರು. ಇದು ಅವರ ಗುಣಗ್ರಾಹಿಯಾದ ಸತ್ಯದೃಷ್ಟಿಗೂ, ಕೇರಳದ ಕಮ್ಯೂನಿಸ್ಟ್ ಸರಕಾರದ ಪ್ರಾಮಾಣಿಕ ಯಶಸ್ಸಿಗೂ ಕೂಡಿಯೇ ಭೂಷಣವೆಂದು ನಾನು ಭಾವಿಸಿದೆ.

ಕೇರಳದ ವಿಸ್ತಾರ 15,000 ಚದರಮೈಲು. ಜನಸಂಖ್ಯೆ 15 ದಶಲಕ್ಷ. ಭಾರತ ಒಕ್ಕೂಟದಲ್ಲಿಯೇ ಈ ರಾಜ್ಯ ಅತಿ ಚಿಕ್ಕದು. ಆದರೆ ಇದರ ಜನಸಂಖ್ಯೆ ವಿಪರೀತ. ಜನದಟ್ಟಣೆ ಬೇರೆ ಎಲ್ಲಿಗಿಂತಲೂ ಹೆಚ್ಚಿನದು. ಪ್ರತಿವರ್ಷ ಸುಮಾರು 3 ಲಕ್ಷ ಪ್ರಜೆ ವೃದ್ಧಿ ಆಗುವದು. ಅಲ್ಲದೆ ಕೆಲವಡೆಗಳಲ್ಲಿ ಒಂದು ಚದರ ಮೈಲಿನಲ್ಲಿ 2,000 ವರೆಗೂ ಜನದಟ್ಟಣೆ ನೆಲಸಿದ್ದು ಇದೆ!

ಕೇರಳವು ಕಡುಬಡವರು ವಾಸಿಸುವ ಅತಿ ಸಿರಿವಂತಿಕೆಯ ನಾಡು! ಕೇರಳದ ಕೌತುಕವೇ ಇದು. ನೈಸರ್ಗಿಕ ಸಮೃದ್ಧಿಯ ನಡುವೆ ಘೋರ ದಾರಿದ್ರ್ಯದ ಪ್ರಜಾವೃದ್ಧಿ. ತೆಂಗು, ಬಾಳೆ, ಅನಾನಸ, ಗೆಣಸು (ಟೊಪಿಯಾಕಾ) ಭತ್ತ, ಬೆಟ್ಟ, ಚಹ—ರಬ್ಬರುಗಳ ತೋಟಗಾರಿಕೆ ಇವೆಲ್ಲವುಗಳಿಂದ ಹಚ್ಚಹಸಿರಾಗಿ ಉರಿಬಿಸಿಲಲ್ಲಿ ಕಂಗೊಳಿಸುವ ಈ ಸೀಮೆಯಲ್ಲಿ ಉದ್ಯೋಗ—ವ್ಯವಸಾಯಗಳ ಅಭಿವೃದ್ಧಿಗೆ ಉತ್ತಮ ಸಾಮಗ್ರಿ ಇದ್ದೂ ಜನತೆಯಲ್ಲಿ ನಿರುದ್ಯೋಗತನ ವಿಪರೀತವಿದೆ—ಅದೂ ಸುರಕ್ಷಿತ ನಿರುದ್ಯೋಗಿಗಳ ಪ್ರಮಾಣ ಇನ್ನೂ ವಿಶೇಷವಾಗಿದೆ. ಶಾಲೆಗೆ ಹೋಗುವ ಹಾಗೂ ಕೆಲಸಕ್ಕೆ ಬಾರದವರ ಲೆಕ್ಕ ಬಿಟ್ಟರೂ ವಯಸ್ಕರಲ್ಲಿ ನಿರುದ್ಯೋಗಿಗಳ ಸಂಖ್ಯೆ ಸುಮಾರು 19,14,000ದಷ್ಟು ಇದೆ! ಈ ನಿರುದ್ಯೋಗ ಕಡಲಿಗೆ ಪ್ರತಿವರ್ಷವೂ ಶಾಲೆ—ಕಾಲೇಜುಗಳಿಂದ ಕಲಿತು ಬಂದು ಕೂಡುವ ಕೆಲಸವಿಲ್ಲದವರ ಹಳ್ಳ ಕಡಿಮೆಯೇ? ಸುಮಾರು 1 ಲಕ್ಷದಷ್ಟು ಜನ! ಕೆಲಸವಿಲ್ಲದ ಕಲಿತ ಹರೆಯದವರ ಸಂಖ್ಯೆ ಇಷ್ಟು ವಿಪುಲವಿರುವಲ್ಲಿ ಅವರಿಗೆ ಕೇವಲ ಬಡತನ, ಕೂಳಿನಗೋಳು ಇದಿರಾಗಲಿಲ್ಲ, ಅಸಂತೋಷಕ್ಕೆ ಅಪಮಾನ, ತಾರುಣ್ಯಕ್ಕೆ ತೇಜೋವಧೆ, ಸಂತಾಪಕ್ಕೆ ಸಾಮಾಜಿಕ ಜಾಗ್ರತಿ ಕೂಡುವಂತಾದರೆ ಕೇಳಬೇಕೇ? ಕ್ರಾಂತಿಕಾರಿ ಪ್ರವೃತ್ತಿಗೆ ಇದಕ್ಕೂ ಫಲವತ್ತಾದ ಭೂಮಿ ಯಾವುದು? ಮಾರ್ಕ್ಸ್‌ವಾದವನ್ನು ಅರಗಿಸಿಕೊಳ್ಳಲು ಅಲ್ಲ, ಅರಿತುಕೊಳ್ಳಲೂ ಶಿಕ್ಷಣ ಸಂಸ್ಕಾರಬೇಕು. ಸುಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿರುವಲ್ಲಿಯೇ ಭಾರತದಲ್ಲಿ ಕಮ್ಯೂನಿಸ್ಟರ ಕೇಂದ್ರಗಳು ಬೇರು ಬಿಟ್ಟಿವೆ. ಇದಕ್ಕೆ ಕಲ್ಕತ್ತ, ಮುಂಬಯಿಗಳಂತೆ ಕೇರಳವೇ ಸಾಕ್ಷಿ. ಸುಶಿಕ್ಷಿತ ನಿರುದ್ಯೋಗಿಗಳ ಪ್ರಮಾಣ ಅತಿ ಹೆಚ್ಚಾಗಿರುವ ಕೇರಳದಲ್ಲಿಯೇ ಭಾರತದ ಮೊದಲನೆಯ ಕಮ್ಯೂನಿಸ್ಟ್ ಸರಕಾರ ಸ್ಥಾಪಿತವಾದದ್ದು ತೀರ ಸೂಚಕವಾದ ಸಂಗತಿ.

ಈ ಸುಶಿಕ್ಷಿತ ತನದ ಮೂಲಕವೇ ಕೇರಳವು ಮಿಕ್ಕ ರಾಜ್ಯಗಳಿಗಿಂತ ರಾಜಕೀಯ ಜಾಗೃತಿಯಲ್ಲಿ, ಲೋಕಸತ್ತಾತ್ಮಕ ಸಂಘಟನೆಗಳಲ್ಲಿ ಬಹಳ ಮುಂದುವರಿದಿದೆ. ಭಾರತದಲ್ಲಿ ಸಾಕ್ಷರರ ಪ್ರಮಾಣ ಸರಾಸರಿ ನೂರಕ್ಕೆ 18ರಷ್ಟು. ಆದರೆ ಕೇರಳದಲ್ಲಿ ಗಂಡಸರಲ್ಲಿ ಅದು ನೂರಕ್ಕೆ 75 ಮತ್ತು ಹೆಂಗಸರಲ್ಲಿ 55 ಇದೆ! ನೂರಕ್ಕೆ 90ರಷ್ಟು ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. (5 ವರ್ಷ ಮೀರಿದವರು) ಇಲ್ಲಿಯ ಜನ ಸಂಖ್ಯೆಯಲ್ಲಿ ಮೂರಕ್ಕೆ ಒಂದು ಕ್ರೈಸ್ತರು. ಪ್ರಾಥಮಿಕ ಶಿಕ್ಷಣವೆಲ್ಲ ಹೆಚ್ಚಾಗಿ ಕ್ರೈಸ್ತಧರ್ಮ ಪ್ರಸಾರಕ ಸಂಸ್ಥೆಗಳ ಕೈಯಲ್ಲಿಯೇ. ರಾಜ್ಯದಲ್ಲಿ ಒಟ್ಟು 3,283 ಪ್ರಾಥಮಿಕ ಶಾಲೆಗಳಿವೆ. ಅವುಗಳಲ್ಲಿ 978 ಮಾತ್ರ ಸರಕಾರದವು.

ಹೀಗೆ ಶಿಕ್ಷಣದ ಉಚ್ಚಮಟ್ಟದಲ್ಲಿದ್ದ ಕೇರಳದ ಜನ ತಮ್ಮ ರಾಜಕೀಯ ಹಕ್ಕು ಹಿತಗಳ ಕುರಿತು ತುಂಬ ಎಚ್ಚರವಾಗಿರುವುದೂ ಅಚ್ಚರಿಯಲ್ಲ. ಜನರು ಪರಿಶ್ರಮಿಗಳು. ತಮ್ಮ ಸುತ್ತಲಿನ ಆಗುಹೋಗುಗಳ ಕುರಿತು ಚಿಕಿತ್ಸೆಯಿಂದ ವಿಚಾರ ಮಾಡುವಂಥವರು. ಅವರಿಗೆ ಒಣ ಸಿದ್ಧಾಂತ, ಹುಸಿ ಪ್ರಯೋಗ, ಟೊಳ್ಳು ಆಶ್ವಾಸನಗಳಲ್ಲಿ ನಂಬಿಕೆ ಕಡಿಮೆ. ವಿಭೂತಿ ಪೂಜೆ ಅವರಲ್ಲಿ ಪೂಜೆಯೇ. ತಮ್ಮ ಪ್ರಶ್ನೆಗಳಿಗೆ ಪರಿಹಾರ ನೀಡಲಾರದ ಶಾಸನವನ್ನೂ ನಾಯಕರನ್ನೂ ಅವರು ಅಧಿಕಾರದಿಂದ ತಳ್ಳಲು ಎಂದೂ ಅನುಮಾನ ಮಾಡಿದವರಲ್ಲ. ಸ್ವಾತಂತ್ರ್ಯಪ್ರಾಪ್ತಿಯ ನಂತರ ಈ ವರೆಗೆ 10 ವರ್ಷಗಳಲ್ಲಿ ಕೇರಳದಲ್ಲಿ 7 ಸರಕಾರಗಳು ತಲೆ ಎತ್ತಿ ತಳಮೇಲಾದುವು. ಇದರ ಇಂಗೀತವೇನು? ಜನಕ್ಕೆ ಒಳ್ಳೆ ಸರಕಾರ ಬೇಕು. ಅಧಿಕಾರ ಯಾವ ಪಕ್ಷದ ಕೈಗೆ ಬಂದರೂ ಸರಿ.

ಇಂಥ ಹಿನ್ನೆಲೆಯಲ್ಲಿ ಜನತೆ ಕಮ್ಯೂನಿಸ್ಟ್ ಪಕ್ಷದ ಕೈಗೆ ಅಧಿಕಾರ ಒಪ್ಪಿಸಿತು. ಆ ಹಿಂದಿನ ಕಾಂಗ್ರೆಸ್ಸಿನ ಆಳಿಕೆಗೆ ಅವರು ಬೇಸತ್ತು ಹೇಸಿ ಹೋಗಿದ್ದರು. ಹೀಗೆಂದ ಮಾತ್ರಕ್ಕೆ ಕಮ್ಯೂನಿಸ್ಟ್ ಪಕ್ಷದಲ್ಲಿ ಜನತೆ ಮನಸಾರೆ ನಂಬಿಗೆ ಇಟ್ಟಿತೆಂತಲ್ಲ. ಶಾಸನ ಸಭೆಯಲ್ಲಿ ಈ ಪಕ್ಷಕ್ಕೆ ಕೇವಲ ಎರಡೇ ಮತಗಳ ಹೆಚ್ಚಿನ ಸಂಖ್ಯೆ. ಇಷ್ಟು ಅಲ್ಪ ಅನಿಶ್ಚಿತ ಬಹುಮತದ ತಂತಿಯ ಮೇಲೆ ಕಮ್ಯೂನಿಸ್ಟರ ಆಡಳಿತ ಡೊಂಬರ ಆಟದಂತೆ ಸಾಗಬೇಕು. ಜನತೆಯಲ್ಲಿ ಬರೆ ನೂರಕ್ಕೆ 35 ಜನ ಕಮ್ಯೂನಿಸ್ಟ್ ಪಕ್ಷಕ್ಕೆ ಮತಹಾಕಿದರು. ಆದರೆ ಅಷ್ಟರಿಂದಲೇ ಪಕ್ಷಕ್ಕೆ ಜನತೆಯಲ್ಲಿ ಸ್ಥಾನವಿಲ್ಲವೆನ್ನುವಂತೆಯೂ ಇಲ್ಲ. ಏಕೆಂದರೆ ಉತ್ತರ ಪ್ರದೇಶ, ಬಂಗಾಲ ಮುಂತಾದ ರಾಜ್ಯಗಳಲ್ಲಿ ಕಾಂಗ್ರೆಸ್ಸಿಗಾದರೂ ಅಂಥ ಯಾವ ಪ್ರಚಂಡ ಬಹುಮತ ದೊರೆತಿದೆ? ನೂರಕ್ಕೆ 30, 40ರಷ್ಟು ಮತಗಳೇ ಅಲ್ಲವೇ! ಹಿಂದೆ ಇದೇ ಕೇರಳದಲ್ಲಿ ಪ್ರಜಾಸಮಾಜವಾದಿ ಪಕ್ಷದ ಬಲ ವಿಧಾನ ಸಭೆಯಲ್ಲಿ ಎಷ್ಟು ಇತ್ತು? 126 ಸದಸ್ಯರಲ್ಲಿ ಬರೆ 19! ಈ ಮಾನದಲ್ಲಿ ಈ ಪಕ್ಷ ಜನತೆಯಿಂದ ಪಡೆದ ಮತಗಳ ಪ್ರಮಾಣವೆಷ್ಟಾಗಬಹುದು?

ಇಲ್ಲಿ ಗಮನಿಸಬೇಕಾದ ವಿಷಯವೇನೆಂದರೆ, ಕಮ್ಯೂನಿಸ್ಟ್ ಪಕ್ಷವು ಕೇರಳದಲ್ಲಿ ಒಂದು ವಿಶಿಷ್ಟ, ಕೆಲಮಟ್ಟಿಗೆ ವಿಚಿತ್ರ ಪರಿಸ್ಥಿತಿಯಲ್ಲಿ ಪಟ್ಟ ಕಟ್ಟಿದೆ. ತನ್ನ ಬಲಾಬಲದ ಪೂರ್ತಿ ಅರಿವು ಕಮ್ಯೂನಿಸ್ಟ್ ಪಕ್ಷದ ಧುರೀಣರಿಗೆ ಇದೆ. "ಪಾರ್ಲಿಮೆಂಟರಿ ಪದ್ಧತಿಯ ಪ್ರಜಾಸತ್ತೆಯಲ್ಲಿ ಈ ಕಮ್ಯೂನಿಸ್ಟ್ ಪ್ರಯೋಗ ಜಗತ್ತಿನಲ್ಲಿಯೇ ಮೊದಲಿನದು" ಎಂಬ ಬೆರಗು ಸೋಜಿಗ ಲೋಕಕ್ಕೆ ಇದೆ. ಆದರೆ ಈ ಸೋಜಿಗದ ಪ್ರಯೋಗದ ಕುರಿತು ಸ್ವತಃ ಕೇರಳದ ಕಮ್ಯೂನಿಸ್ಟರು ವಿಪರೀತ ಆಶಾವಾದಿಗಳಾಗಿಲ್ಲ. ತಮ್ಮ ಸರಕಾರವನ್ನು ಅವರು "ಕಮ್ಯೂನಿಸ್ಟ್ ಸರಕಾರ" ವೆಂದು ಕೂಡ ಕರೆಯಲು ಒಪ್ಪುವದಿಲ್ಲ. ಅವರ ಹೇಳಿಕೆಯಂತೆ ಕೇರಳದ ಇಂದಿನ ಸರಕಾರವು ಶ್ರಮಜೀವಿಗಳ ಕಡೆಗೆ ಒಲವಿರುವ, ಭಾರತೀಯ ರಾಜ್ಯಘಟನೆಯೊಳಗೆ ಆಡಳಿತ ನಡೆಸುವ "ಕಮ್ಯೂನಿಸ್ಟ್ ಮುಂದಾಳುತನದ" (Communist—led) ಸರಕಾರವಾಗಿದೆ. ಹೀಗೆ ಕರೆಯಲಿಕ್ಕೆ ವಿನಯ ಒಂದೇ ಕಾರಣವಲ್ಲ, ವಿವೇಕವೂ ಅಹುದು. ಈ ಸರಕಾರದಲ್ಲಿ ಕಮ್ಯೂನಿಸ್ಟರೊಂದಿಗೆ ಸ್ವತಂತ್ರ ಪ್ರತಿನಿಧಿಗಳೂ ಇದ್ದಾರೆ. ಮತ್ತು ಭಾರತೀಯ ರಾಜ್ಯಘಟನೆಯ ಮರ್ಯಾದೆಯಲ್ಲಿ ವ್ಯವಹರಿಸುವ ತನಕವೂ ಈ ಸರಕಾರ ಶುದ್ಧ ಅಥವಾ ಪೂರ್ಣ ಕಮ್ಯೂನಿಸ್ಟ್ ಮಾದರಿಯ ಆಡಳಿತವಾಗಲಾರದು.

ಹೊಸದಾಗಿ ಅಧಿಕಾರಕ್ಕೆ ಬಂದ ಕಮ್ಯೂನಿಸ್ಟರು ತುಂಬ ಮುಂಜಾಗ್ರತೆ ಮುಂಧೋರಣೆಗಳಿಂದ ಹೆಜ್ಜೆ ಇಡಹತ್ತಿದರು. ರಾಜ್ಯದ ಆಡಳಿತ ತಲೆ ಭಾರದ ವೆಚ್ಚದ್ದಾಗಿತ್ತು. ಅರ್ಧಕ್ಕಿಂತ ಹೆಚ್ಚಿನ ಕಂದಾಯವೆಲ್ಲ ಆಡಳಿತಗಾರರ ಸಂಬಳ. ಭತ್ತೆಗಳ ತೊಬರಿ ತುಂಬಲಿಕ್ಕೇ ಹೋಗುತ್ತಿತ್ತು. ಹತ್ತು ವರ್ಷಕಾಲ ಲಂಚಗುಳಿ ದುರಾಡಳಿತದಲ್ಲಿ ಜನತೆಯ ಹಿತಕ್ಕೆ ಎಂದೋ ತಿಲಾಂಜಲಿ ಬಿಟ್ಟಂತೆ ಇತ್ತು. ಕೇಂದ್ರ ಸರಕಾರವೇ ಈ ರಾಜ್ಯವನ್ನು ಕೈಬಿಟ್ಟಿತ್ತು! ಇಂಥ ಪರಿಸ್ಥಿತಿಯಲ್ಲಿ ಕಾಂಗ್ರೆಸ್—ಪ್ರಜಾಸಮಾಜವಾದಿ ಪಕ್ಷಗಳ ಮಂತ್ರಿಮಂಡಳಗಳಿಂದ ಬೇಸತ್ತು ನಿರಾಶೆಪಟ್ಟು ಅವರ ಪರಸ್ಪರ ಜಗಳ—ಜಂಜಡಗಳಿಗೆ ಹೇಸಿಕೊಂಡು ಜನತೆ ಕಮ್ಯೂನಿಸ್ಟರಿಗೆ ಒಂದು ಅವಕಾಶ ಕಲ್ಪಿಸಿಕೊಟ್ಟಿತು.

ಹೊಸ ಸರಕಾರ ನಡೆಯಿಸುವವರಿಗೆ ಆದಿಯಿಂದಲೇ ಗೊತ್ತು. ಸುಖಕ್ಕೆ ಬಂದ ಪದವಿಯಲ್ಲ ಇದು, ಎಂತ. ಆರಂಭದಲ್ಲಿಯೇ ಪಕ್ಷವು ತನ್ನ ಉತ್ತಮೋತ್ತಮ ಧುರೀಣರನ್ನು ಸರಕಾರದ ಶಕಟಕ್ಕೆ ಹೂಡಿತು. ಈ ಕಮ್ಯೂನಿಸ್ಟ್ "ಏಕಾದಶಿ"ಯ (11 ಮಂತ್ರಿಗಳು) ನಾಯಕ 48 ವರ್ಷ ಪ್ರಾಯದ ಶ್ರೀ ನಂಬೂದ್ರಿಪಾದರು. ಇವರ ಪೂರ್ತಿ ಹೆಸರು ಈ. ಎಂ. ಶಂಕರನ್ ನಂಬೂದ್ರಿಪಾದ. ಆದರೆ ಜನವೆಲ್ಲ ಇವರನ್ನು ಕರೆಯುವ ಮೆಚ್ಚಿಗೆಯ ಹೆಸರು "ಈ. ಎಂ. ಎಸ್." (E. M. S.) ಇವರ ಅಭೇದ್ಯ ಶಕ್ತಿ, ಇವರ ಜನಪ್ರಿಯತೆ, ಸರ್ವಪ್ರಿಯತೆ ಸರಳ ನಿರಾಡಂಬರ ಸದಾ ನಗುಮೊಗದ ಈ. ಎಂ. ಎಸ್. ಭಾರತದ ಶ್ರೇಷ್ಠ ನಾಯಕರಲ್ಲಿ ಒಬ್ಬರು. "ಕೇರಳದ ಬುಲ್ಗಾನಿನ್" ಎಂದು ಜನ ಇವರನ್ನು ಕರೆಯುತ್ತಾರೆ. ರಾಜಕೀಯ ಪಕ್ಷ ಯಾವುದೇ ಇದ್ದರೂ; ಎಲ್ಲರೂ ನಂಬೂದ್ರಿಪಾದರನ್ನು ಪ್ರೀತ್ಯಾದರಗಳಿಂದ ಕಾಣುವವರೇ. ಕಮ್ಯೂನಿಸ್ಟರಲ್ಲದವರೂ ಇವರನ್ನು ಒಬ್ಬ ಕುಲೀನ ಸಜ್ಜನನೆಂದು ಗೌರವಿಸುವರು. ಉತ್ತರ ಕೇರಳದ ಒಂದು ಸಂಪ್ರದಾಯವಂತ ಸಂಪನ್ನ ನಂಬೂದ್ರಿ ಬ್ರಾಹ್ಮಣ ಕುಲದಿಂದ ಇವರು ಬಂದವರು. ಒಳ್ಳೇ ಸಂಸ್ಕೃತ ಪಂಡಿತರು. ಇವರ ರಾಜಕೀಯದ ಆರಂಭ ಗಾಂಧೀವಾದಿ ಕಾಂಗ್ರೆಸ್ಸಿಗನೆಂದು ಆಯಿತು. ನಂತರ ಇವರು ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಸೇರಿ ಅದರ ಸಂಯುಕ್ತ ಕಾರ್ಯದರ್ಶಿ ಆದರು. ಅಲ್ಲಿಂದ 1939ರಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಕೊನೆಯ ಹೆಜ್ಜೆ ಇಟ್ಟರು. ತಮ್ಮ 2 ಲಕ್ಷದ ಎಲ್ಲ ಆಸ್ತಿಯನ್ನು ಮಾರಿ ನಂಬೂದ್ರಿಪಾದರು ಪಕ್ಷದ ನಿಧಿಗೆ ಸಮರ್ಪಿಸಿದರು. ಭಾರತೀಯ ಕಮ್ಯೂನಿಸ್ಟನ್ಯಾರೂ ಇಷ್ಟು ಘನವಾದ ವರ್ಗಣಿ ತನ್ನ ಪಕ್ಷಕ್ಕೆ ಸಲ್ಲಿಸಿದ್ದು ಇಲ್ಲ. ಈಗ ಮುಖ್ಯ ಮಂತ್ರಿಯಾಗಿದ್ದರೂ ಹಿಂದಿನ ಮುಖ್ಯ ಮಂತ್ರಿಗಳಂತೆ ನಂಬೂದ್ರಿಪಾದರು ತಾನೊಬ್ಬ ಅತಿಮಾನವ ಆಳುವ ಮಹಾಪ್ರಭು ಎಂದೂ ತಪ್ಪದ, ಪಡೆದುಬಂದ ಪುಢಾರಿ ಎಂದು ಭಾವಿಸಿಕೊಂಡವರೇ ಅಲ್ಲ. ಇತರ ಯಾವ ಕಮ್ಯೂನಿಸ್ಟ್ ಮಂತ್ರಿಗಿಂತಲೂ ಇವರು ಅಧಿಕಾರ ವರ್ಗಗಳಲ್ಲಿ ಮೆಚ್ಚಿಗೆ ಮನ್ನಣೆ ಪಡೆದಿರುತ್ತಾರೆ!

ನಾಡಿನ ನಾಡಿಯ ಮಿಡಿತವನ್ನು ಸರಿಯಾಗಿ ಬಲ್ಲ ಇಂಥ ನಾಯಕನ ಸರಕಾರ ಜನಸೇವೆಗೆ ಹಗಲಿರುಳು ದುಡಿಯುವದೇನು ದೊಡ್ಡ ಸೋಜಿಗ? ಇತರ ಪಕ್ಷಗಳ ಕಣ್ಣು, ಭಾರತದ ಜನತೆಯ ಕಣ್ಣು, ಕೇಂದ್ರದ ಕಾಂಗ್ರೆಸ್ ಸರಕಾರದ ಕಣ್ಣು, ಅಂತರ್‌ರಾಷ್ಟ್ರೀಯ ಕಮ್ಯೂನಿಸ್ಟ್ ಹಾಗೂ ಕಮ್ಯೂನಿಸ್ಟೇತರ ಪ್ರಪಂಚದ ಕಣ್ಣು ತಮ್ಮ ಹೊಸ ಘಟನಾತ್ಮಕ ಸರಕಾರದ ಪ್ರಯೋಗದ ಮೇಲೆ ಇದೆಯೆಂದು ನಂಬೂದ್ರಿಪಾದ್‌ರು ಬಲ್ಲರು. ಅಧಿಕಾರಕ್ಕೆ ಬಂದೊಡನೆ ಕಮ್ಯೂನಿಸ್ಟರು ಸರ್ವಾಧಿಕಾರ ಕಟ್ಟಲು ಹೊರಟಿಲ್ಲವೆಂದು ಜನಕ್ಕೆ ಮನಗಾಣಿಸಲು ಅವರು ಮೊದಲು ಹೊರಟರು. ಆಡಳಿತದ ಎಲ್ಲ ಮಟ್ಟಗಳಲ್ಲಿಯೂ ಜನತೆಯ ಸಮಿತಿಗಳು ರಚಿಸಲ್ಪಟ್ಟವು. ಜನತೆಗೆ ಆಡಳಿತದಲ್ಲಿಯೂ ಸಮಾಜದಲ್ಲಿಯೂ ರೂಢಿಯಾಗಿ ಬೇರೂರಿ ಬಂದ ಅನಿಷ್ಟ ಅಂಶಗಳನ್ನು ಹೋಗಲಾಡಿಸಲು ಕಾ

(೬ನೇ ಪುಟ ನೋಡಿ)

ಅಮೃತಸರದಲ್ಲಿ ನಡೆದ ನಮ್ಮ ಪಾರ್ಟಿ ಅಧಿವೇಶನವು ವಿಶೇಷ ಗಮನವನ್ನು ಸೆಳೆ ದಿತು. ಅದರ ಕಾರ್ಯಕಲಾಪಗಳನ್ನು ವಿ ಸ್ತಾರವಾಗಿ ಪ್ರಕಟಿಸಲಾಯಿತು ಮತ್ತು ಅದ ತೀರ್ಮಾನಗಳ ಮೇಲೆ ವಿಶಾಲವಾ ದ ಟೀಕೆಗಳೂ ಬಂದುವು.

ಇದು ಆಶ್ಚರ್ಯವೇನಲ್ಲ. ಕಮ್ಯೂನಿ ಸ್ಟ್ ಪಾರ್ಟಿಯು ಯಾರಿಗಾದರೂ ಬೇಕೆ ರಲಿ ಇಲ್ಲದಿರಲಿ ಅದನ್ನು ಕಡೆಗಣಿಸುವಂತಿ ಲ್ಲ. ಕೇರಳ ರಾಜ್ಯದಲ್ಲಿ ಅದು ಸರಕಾರವ ನ್ನು ನಡೆಸುತ್ತಿರುವ ಪಕ್ಷವಾಗಿದೆ, ಪಾರ್ಲಿ ಮೆಂಟಿನಲ್ಲಿ, ಪಶ್ಚಿಮ ಬಂಗಾಳ ಮತ್ತು ಆಂಧ್ರ ರಾಜ್ಯಗಳಲ್ಲಿ ಪ್ರಮುಖ ವಿರೋಧ ಪಕ್ಷವಾಗಿದೆ. ಕಾರ್ಮಿಕ ವರ್ಗದ ನಡುವೆ ಅದು ಅತ್ಯಂತ ದೊಡ್ಡ ಶಕ್ತಿಯಾಗಿದೆ. ಇ ವೆಲ್ಲಕ್ಕಿಂತ ಹೆಚ್ಚಾಗಿ ದಿನ ದಿನಕ್ಕೂ ಹೆ ಚ್ಚು ಪ್ರಭಾವಶಾಲಿಯಾಗುತ್ತಿರುವ ಮತ್ತು ದೇಶದ ಎಲ್ಲ ಕಡೆಗಳಲ್ಲಿಯೂ ಭವಿಷ್ಯದ ಪಕ್ಷವಾಗಿ ಲಕ್ಷಾಂತರ ಜನತೆ ಎದುರು ನೋಡುತ್ತಿರುವ ಪಕ್ಷವಾಗಿದೆ.

ಅಧಿವೇಶನದ ಮೇಲೆ ಟೀಕೆಗಳು

ಅಧಿವೇಶನದ ಮುನ್ನ ನಮ್ಮ ಬಗ್ಗೆ ಒ ಳ್ಳೆಯ ನುಡಿಗಳನ್ನು ಎಂದೂ ಆಡದಿರುವ "ಟೈಂಸ್ ಆಫ್ ಇಂಡಿಯ" ಪತ್ರಿಕೆಯು ಬೇಸರದಿಂದ ಈ ರೀತಿ ಬರೆಯಿತು. "ತನ್ನ ಅಸ್ತಿತ್ವದಲ್ಲಿ ಹದಿನೈದು ವರ್ಷಗಳ ನಂತರ ಕಮ್ಯೂನಿಸ್ಟ್ ಪಾರ್ಟಿಯು ದೇಶದಲ್ಲಿ ದೊಡ್ಡ ರಾಜಕೀಯ ಶಕ್ತಿಯಾಗಿ ಬೆಳೆದಿದೆ ...ಅದರ ಶಕ್ತಿ ಸದಸ್ಯತ್ವದಿಂದಲೇ ಅಲ್ಲದೆ, ಜನತೆಯ ಬೆಂಬಲದಲ್ಲಿಯು ಹೆಚ್ಚಿದೆ."

ಅಧಿವೇಶನದ ಮೇಲೆ ಟೀಕೆಗಳು ವೈ ವಿಧ್ಯ ಪೂರ್ಣವಾಗಿವೆ—ಕೆಲವು ಸ್ನೇಹ ಪರವಾಗಿದ್ದರೆ, ಕೆಲವು ಅಷ್ಟಿಲ್ಲ, ಕೆಲವು ತೀವ್ರವಾಗಿ ದ್ವೇಷ ಪೂರಿತವಾಗಿವೆ. ಅ ತ್ಯಂತ ಹೆಚ್ಚು ಟೀಕೆ ಬಂದಿರುವ ಅಂಶವೆಂ ದರೆ—ಕುತೂಹಲದಿಂದ ಮತ್ತು ತಪ್ಪು ಅ ಭಿಪ್ರಾಯದಿಂದ ಕೂಡಿರುವುವು—ಪಾರ್ಟಿ ಘಟನೆಯ ಪ್ರಸ್ತಾವನೆಯಲ್ಲಿ ಕಮ್ಯೂನಿ ಸ್ಟ್ ಪಾರ್ಟಿಯು ಶಾಂತಿಯುತ ಮಾರ್ಗ ದಲ್ಲಿ ಸಮಾಜವಾದವನ್ನು ಸಾಧಿಸಲು ಯ ತ್ನಿಸುವುದು ಮತ್ತು ಸಮಾಜವಾದೀ ಭಾ ರತದಲ್ಲಿ ಸರಕಾರಕ್ಕೆ ವಿರೋಧವಿರುವ ರಾ ಜಕೀಯ ಪಕ್ಷಗಳು ಅವು ಎಲ್ಲಿಯ ವರೆಗೆ ದೇಶದ ಘಟನೆಗೆ ಬದ್ಧವಾಗಿರುವುವೊ ಅಲ್ಲಿ ಯ ವರೆಗೆ ಅಸ್ತಿತ್ವದಲ್ಲಿರಲು ಹಕ್ಕಿರುವು ದೆಂದು ಹೇಳಿರುವುದಾಗಿದೆ.

ನಮ್ಮ ಗೆಳೆಯರು ಈ ಘೋಷಣೆಗಳ ನ್ನು ಸ್ವಾಗತಿಸಿದ್ದಾರೆ. ನಮ್ಮ ವಿರೋಧಿ ಗಳು—ಶ್ರೀ ಢೇಬರ್, ಶ್ರೀ ಶ್ರೀಮನ್ನಾ ರಾಯಣರಿಂದ ಹಿಡಿದು ಸ್ವಹಿತಸಾಧಕರ ಪತ್ರಿಕೆಗಳ ವರೆಗೆ—ಒಪ್ಪಿಸಿರುವ ಕೂಗೆಂ ದರೆ ಈ ಘೋಷಣೆಗಳನ್ನು ನಂಬಲು ಸಾ ಧ್ಯವಿಲ್ಲವೆಂಬುದು, ಕಮ್ಯೂನಿಸ್ಟರು "ಬದ ಲಾಗಿಲ್ಲ" ಆದ್ದರಿಂದ ಅವರನ್ನು ನಂಬಬಾ ರದು ಎಂಬುದಾಗಿದೆ.

ಕಳೆದ ಹತ್ತು ವರ್ಷಗಳಲ್ಲಿ ಜನತೆಗಿತ್ತ ಎಲ್ಲ ಆಶ್ವಾಸನೆಗಳನ್ನು ಗಾಳಿಗೆ ತೂರಿದ ವರೇ ಇಂದು ಇಂಥ ಎಚ್ಚರದ ನುಡಿ ಗಳನ್ನು ನುಡಿಯುತ್ತಿರುವುದು, ನಮ್ಮ ಪಾ ರ್ಟಿಯ ಜನಪ್ರಿಯತೆಯ ಬಗ್ಗೆ ಅವರು ಚಿಂತಾಗ್ರಸ್ತರಾಗಿರುವುದನ್ನು ತೋರಿಸು ತ್ತದೆ. ಹಿಂದೆ ಆಗುತ್ತಿದ್ದಂತೆ ಕಮ್ಯೂನಿ ಸ್ಟ್ ವಿರೋಧವು ಜನತೆಯ ಮುಂದೆ ಇನ್ನು ಸಾಗದು ಎಂದು ಅವರಿಗೆ ತಿಳಿದಿದೆ. ಹೆಚ್ಚು ಹೆಚ್ಚು ಜನರು ನಮ್ಮಲ್ಲಿ ನಂಬಿಕೆ ಇರಿಸಲಾರಂಭಿಸಿರುವುದರಿಂದ ಅವರು, ಜ ನರು ನಮ್ಮ ಮೇಲೆ ನಂಬಿಕೆ ಇಂಸಬಾರ ದೆಂದು ಹೇಳುತ್ತಿದ್ದಾರೆ. ಇದು ಅವರ ಭೀತಿಯನ್ನು ಎತ್ತಿತೋರಿಸುತ್ತದೆ.

ನಂಬಿಕೆಯೂ ಅಲ್ಲ ತಂತ್ರವೂ ಅಲ್ಲ—ದೃಢವಾದ ನೀತಿ ಅಷ್ಟೆ

ಅನೇಕರು ಪ್ರಶ್ನೆಯನ್ನು ಹೀಗೆ ಕೇಳು ತ್ತಾರೆ: ಕಮ್ಯೂನಿಸ್ಟರಾದ ನೀವು ಶಾಂತಿ ಯುತವಾದ ಸಾಧನವನ್ನು **ನಂಬಿಕೆ** ಇರಿ ಸಿದ್ದೀರ ಇಲ್ಲವೆ ಅದು ಕೇವಲ **ತಂತ್ರವೇ?** ಇದಕ್ಕೆ ನಮ್ಮ ಉತ್ತರ: ಎರಡೂ ಇಲ್ಲ ಎಂದು.

ಅಹಿಂಸೆಯನ್ನು ದೃಢವಾಗಿ ಒಪ್ಪಿಕೊ ಳ್ಳುವುದು ಎಂದರೆ, ಸಮಾಜವಾದೀ ಹೋ ರಾಟದ ಬೆಳವಣಿಗೆಯಲ್ಲಿ ಯಾವ ಸಂದ ರ್ಭದಲ್ಲಿಯೇ ಆಗಲಿ, ಬಹುಶೇಕ ಜನತೆ ಯ ಅಭಿಪ್ರಾಯವನ್ನು ತುಳಿಯಲು ಆಳು ವ ವರ್ಗವು ಸಶಸ್ತ್ರ ಧಾಳಿ ನಡೆಸುವುದಿಲ್ಲ ಎಂದೂ, ಎಲ್ಲ ಸಂದರ್ಭಗಳಲ್ಲೂ ಸಹ ಅ ವರು ಪ್ರಜಾಪ್ರಭುತ್ವ ರೂಪವನ್ನು ಅನುಸ ರಿಸಿ, ಜನತೆಯ ಪ್ರಜಾಪ್ರಭುತ್ವ ತೀರ್ಪ ನ್ನು ಗೌರವಿಸುವರೆಂದು ನಾವು ವಿಶ್ವಾಸ ವುಳ್ಳವರಾಗಿದ್ದೇವೆಂದು ಅರ್ಥ ಬರುತ್ತದೆ. ಬಂಡವಾಳಶಾಹೀ ಮತ್ತು ಭೂಮಾಲಿಕರ ಔದಾರ್ಯದಲ್ಲಿ ಅಚಲ ವಿಶ್ವಾಸವುಳ್ಳವರು ಮಾತ್ರ ಹಾಗೆ ಹೇಳಲು ಸಾಧ್ಯ.

ಇನ್ನು ಶಾಂತಿಯುತ ಸಾಧನ ಒಂದು "ತಂತ್ರ" ಎಂದು ಹೇಳುವವರಿಗೆ, ನಮ್ಮ ಪಾರ್ಟಿಯು ಹೇಳುವುದೊಂದು ಮತ್ತು ಮಾಡುವುದೊಂದು ಅಲ್ಲವೆಂದು ಎಲ್ಲರಿಗೂ ತಿಳಿದಿದೆ. ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಗೊಳಿಸಲು ಕಮ್ಯೂನಿ ಸ್ಟರು ಎಂದೂ ಹಿಂಜರಿದಿಲ್ಲ.

ಹಾಗಾದರೆ ಪರಿಸ್ಥಿತಿ ಏನು?

ಆಳುವ ವರ್ಗವು ಶಾಂತಿಯುತವಾಗಿ ಶರಣಾಗತವಾಗುವುದು ಎಲ್ಲಿಯೂ ಇಲ್ಲ ವೆಂದು ತಿಳಿದಿರುವುದರಿಂದಾಗಿ ಹಿಂಸೆ ಮ ತ್ತು ಅಂತರ್ಯುದ್ಧವು ಅನಿವಾರ್ಯವೆಂ ದು ನಾವು ಹೇಳುತ್ತೇವೆಯೆ? ಇಲ್ಲ. ಇಂದಿನ ಐತಿಹಾಸಿಕ ಸ್ಥಿತಿಗತಿಗಳಲ್ಲಿ ಅ ನೇಕ ದೇಶಗಳಲ್ಲಿ ಸಮಾಜವಾದವನ್ನು ಶಾಂತಿಯುತವಾಗಿ ಸಾಧಿಸುವ ಸಾಧ್ಯತೆ ಇದೆಯೆಂದೂ ಮತ್ತು ಜನತೆಯನ್ನು ಅಂ ತರ್ಯುದ್ಧಕ್ಕೆ ದೂಡಲು ಆಳುವ ವರ್ಗ ಗಳ ಯತ್ನವನ್ನು ಮುರಿಯಲು ಸಾಧ್ಯತೆ ಇದೆಯೆಂದೂ ನಾವು ಪರಿಗಣಿಸುತ್ತೇವೆ. ಸಮಾಜವಾದಕ್ಕಾಗಿ ದುಡಿಯುತ್ತಿರುವ ಪ ಕ್ಷಗಳು ಮತ್ತು ವ್ಯಕ್ತಿಗಳು ಪಾರ್ಲಿಮೆಂಟಿ ನಲ್ಲಿ ಬಹುಮತವನ್ನು ಪಡೆಯುವ ಮತ್ತು ಪ್ರತಿಗಾಮಿಗಳ ಪ್ರತಿಭಟನೆಯನ್ನು ಸಾ ಮೂಹಿಕ ಕಾರ್ಯಾಚರಣೆಯ ಮೂಲಕ ತೊಡೆದುಹಾಕುವ ಸಾಧ್ಯತೆ ಇದೆ. ನಮ್ಮ ದೇಶದಲ್ಲಿ ಈ ಸಾಧ್ಯತೆಯನ್ನು ವಾಸ್ತವ ವಾಗಿ ಮಾಡಲು ನಾವು ತೀವ್ರವಾಗಿ ಯ ತ್ನಿಸುತ್ತೇವೆ.

ಬೇರೆ ಮಾತಿನಲ್ಲಿ ಹೇಳಬೇಕಿದ್ದಲ್ಲಿ, ಶಾಂತಿಯುತ ಸಾಧನೆಯು ನಮ್ಮ ನಂ ಬಿಕೆಯಾಗಲೀ ತಂತ್ರವಾಗಲೀ ಅಲ್ಲ. ಅದು ಒಂದು ನೀತಿ—ದೃಢವಾದ ಅ ರ್ಥವುಳ್ಳ ನೀತಿ.

★ ಕಮ್ಯೂನಿಸ್ಟ್ ಪಾರ್ಟಿ

ಪ್ರಜಾಪ್ರಭುತ್ವ ಆಚರಿಸುತ್ತಿರುವವರು ಯಾರು?

ಕಮ್ಯೂನಿಸ್ಟರು "ಸರ್ವಾಧಿಕಾರಿಗಳು" ಮತ್ತು ಅವರು ಅಧಿಕಾರಕ್ಕೆ ಬಂದರೆ ಪ್ರ ಜಾಪ್ರಭುತ್ವವನ್ನು ನಾಶ ಮಾಡುತ್ತಾರೆ ಎಂದು ಹೇಳುವುದನ್ನು ತಿರಸ್ಕರಿಸಲು ನಾ ವು ಬಹುದೂರ ಹೋಗಬೇಕಿಲ್ಲ. ನಮ್ಮ ದೇಶದ ಇತ್ತೀಚಿನ ಅನುಭವವೇ, ಯಾರು ಪ್ರಜಾಪ್ರಭುತ್ವವೆಂದು ಬಾಯಿಯಲ್ಲಿ ಹೇ ಳುತ್ತಿರುವವರು, ಯಾರು ಕೃತಿಯಲ್ಲಿ ತೋರಿಸುತ್ತಿರುವವರು ಎಂಬುದು ಗೋಚರವಾಗಿದೆ. ಕೆಲವು ವಾರಗಳ ಹಿಂ ದೆ ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಕೇರ ಳ ಸರಕಾರವು ಶಾಸನ ಸಭೆಯಲ್ಲಿ ಕೇವಲ ಒಂದು ಓಟು ಬಹುಮತದ ಮೇಲಿರಬೇ ಕಾಗಿತ್ತು. ಆದರೂ ಅದು ವಿರೋಧ ಪ ಕ್ಷಗಳಿಗೆ ಸಂಪೂರ್ಣ ಪ್ರಜಾಪ್ರಭುತ್ವ ಸ್ವಾ ತಂತ್ರ್ಯವನ್ನು ಕೊಡಲು ಹಿಂಜರಿಯಲಿಲ್ಲ. ಒರಿಸ್ಸಾದಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ವು ತನ್ನ ಬಹುಮತ ಕುಸಿಯುತ್ತಿದೆಯೆಂ ದು ಕಂಡುಬಂದಾಗ ವಿರೋಧ ಪಕ್ಷದ ಕೆ ಲವು ಶಾಸನ ಸಭಾ ಸದಸ್ಯರನ್ನು ತನ್ನ ಅಧಿಕಾರ ಮುಂದುವರಿಸುವ ಸಲುವಾಗಿ ಬಂಧಿಸಿತು.

ಕಾಂಗ್ರೆಸ್ ಮಂತ್ರಿ ಮಂಡಲಗಳು ಅ ಧಿಕಾರದಲ್ಲಿರುವ ರಾಜ್ಯಗಳಲ್ಲಿ ಆಳುವ ಪಕ್ಷ ವು ಉಪ ಚುನಾವಣೆಗಳಲ್ಲಿ ಜಯಗಳಿಸುವ ಭರವಸೆಯೇಯಲು ಪ್ರಭುತ್ವ ಯಂತ್ರವ ನ್ನು ಬಳಸಲಾಗುತ್ತಿದೆ. ಕೇರಳದಲ್ಲಿ ನಿರ್ಧ ರಕಾರಿಯಾದ ದೇವಿಕುಲಂ ಉಪ ಚುನಾ ವಣೆಯಲ್ಲಿ ಮಂತ್ರಿಗಳು ಚುನಾವಣಾ ಪ್ರ ಚಾರದಲ್ಲಿ ಭಾಗವಹಿಸ ಕೂಡದೆಂದು ಕ ಮ್ಯೂನಿಸ್ಟ್ ಪಾರ್ಟಿಯು ತೀರ್ಮಾನಿ ಸಿತು.

ಜನತೆಯ ಅಧಿಕಾರವಿಲ್ಲದೆ ಸಮಾಜವಾದವಿಲ್ಲ

ಶ್ರೀ ಮನ್ನಾರಾಯಣರಂಥ ಗೌರವಸ್ಥ ರಿಗೆ ಇವೆಲ್ಲ ಅರ್ಥವಿಲ್ಲದ್ದು, ಶಾಂತಿಯುತ ವಾದ ಮತ್ತು ಪ್ರಜಾ ಪ್ರಭುತ್ವವಾದ ಕ್ರ ಮಗಳ ಬಗ್ಗೆ ನಾವು ದೃಢವಾಗಿರುವುವೆಂ ದು "ಸಾಧಿಸಲು" ನಾವು ಮಾರ್ಕ್ಸ್‌ವಾದ -ಲೆನಿನ್‌ವಾದವನ್ನು ತ್ಯಜಿಸಬೇಕೆಂದು ಅ ವರು ಕೇಳುತ್ತಾರೆ.

ಇದರ ಅರ್ಥವೇನು? ಪಾರ್ಟಿಯು ಇಂದಿನ ಸ್ಥಾನವನ್ನು ಪಡೆಯಲು ಅವಕಾ ಶ ಮಾಡಿಕೊಟ್ಟಂಥ ಸಿದ್ಧಾಂತವನ್ನು ನಾ ವು ತ್ಯಜಿಸಬೇಕೆಂಬುದೇ ಇದರ ಅರ್ಥವಾ ಗಿದೆ. ನಾವು ಕಮ್ಯೂನಿಸ್ಟರಾಗಿರುವುದ ನ್ನು ತ್ಯಜಿಸಿ ಸರ್ವೋದಯದಲ್ಲಿ ನಮ್ಮ ನಂಬಿಕೆಯನ್ನು ಘೋಷಿಸಬೇಕೆಂಬುದೇ ಇದರ ಅರ್ಥವಾಗಿದೆ.

ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂ ಲಭೂತವಾದ ಬೋಧನೆಗಳಲ್ಲಿ ಸಮಾಜ ವಾದವನ್ನು ಕ್ರಾಂತಿಯಿಂದ ಸ್ಥಾಪಿಸಬ ಹುದು, ಅಂದರೆ ಕಾರ್ಮಿಕ ವರ್ಗದ ನೇ ತೃತ್ವದಲ್ಲಿ ದುಡಿಯುವ ಜನತೆಯು ಅಧಿ ಕಾರ ವಶಪಡಿಸಿಕೊಳ್ಳುವುದು ಎಂಬುದೂ ಒಂದಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ನಮ್ಮ ದೇಶದ ಜನತೆಯಲ್ಲಿ ಈ ಅಂಶವ ನ್ನು ಬೇರೂರುವಂತೆ ಮಾಡಲಾಗಿದೆ—ಅಂದರೆ ಬಂಡವಾಳಶಾಹಿ ಮತ್ತು ಭೂ ಮಾಲಿಕರುಗಳಿಂದ ಸಮಾಜವಾದವನ್ನು ಸ್ಥಾಪಿಸಲಾಗುವುದಿಲ್ಲ, ದುಡಿಯುವ ಜನತೆ ಯ ಕೈಯಲ್ಲಿ ಪ್ರಭುತ್ವ ಶಕ್ತಿ ಇಲ್ಲದಿದ್ದಲ್ಲಿ ಸಮಾಜವಾದವನ್ನು ಸ್ಥಾಪಿಸಲಾಗುವುದಿ ಲ್ಲ. ಆದ್ದರಿಂದಾಗಿ, ಮಾರ್ಕ್ಸ್‌ವಾದ—ಲೆನಿನ್‌ವಾದವನ್ನು ತ್ಯಜಿಸುವುದೆಂದರೆ ಸ ಮಾಜವಾದವನ್ನೇ ತ್ಯಜಿಸಿದಂತಾಗುತ್ತದೆ.

ಶ್ರಮಜೀವಿ ಅಂತರ ರಾಷ್ಟ್ರೀಯತೆ

ಶ್ರಮಜೀವಿ ಅಂತರ ರಾಷ್ಟ್ರೀಯತೆಯ ಬಗ್ಗೆ ನಮ್ಮ ಟೀಕಾಕಾರರು ವಿರೋಧ ವ ಕ್ತಗೊಳಿಸಿದ್ದಾರೆ. "ಇದು ನಿಮ್ಮ ಪರದೇ ಶಾಭಿಮಾನವನ್ನು ತೋರಿಸುತ್ತದೆ" ಎಂದು ನಮಗೆ ಹೇಳುತ್ತಾರೆ.

ಹಾಗಿದ್ದರೆ ನಿಜಾಂಶವೇನು? ಇನ್ನೊಂ ದು ದೇಶದ ಪಾರ್ಟಿ ವ್ಯವಹಾರದಲ್ಲಿ ಪ್ರ ವೇಶಿಸಲು ಯಾವ ಕಮ್ಯೂನಿಸ್ಟ್ ಪಾರ್ಟಿ ಯೂ ಬಯಸುವುದಿಲ್ಲ. ಪ್ರತಿ ಕಮ್ಯೂನಿ ಸ್ಟ್ ಪಕ್ಷವೂ ಸ್ವತಂತ್ರವಾದುದಾಗಿದೆ, ಅಂದರೆ ತಮ್ಮ ದೇಶದಲ್ಲಿನ ಪರಿಸ್ಥಿತಿಯ ತಿಳುವಳಿಕೆಯ ಆಧಾರದ ಮೇಲೆ ತನ್ನ ಧೋರಣೆಯನ್ನು ರೂಪಿಸಲು ಸ್ವತಂತ್ರವಾ ಗಿದೆ. ಅದೇ ಸಮಯದಲ್ಲಿ ಯಾವ ನಿಷ್ಠಾ ವಂತ ಕಮ್ಯೂನಿಸ್ಟನೂ "ರಾಷ್ಟ್ರೀಯ ಕ ಮ್ಯೂನಿಸಂ" ಎಂದು ಹೇಳುವ ಸಿದ್ಧಾಂತ ವನ್ನು ಒಪ್ಪಿಕೊಳ್ಳಲಾರ.

ಎಲ್ಲ ದೇಶಗಳ ಕಮ್ಯೂನಿಸ್ಟ್ ಪಕ್ಷಗಳ ನ್ನು ಒಂದು ಗೂಡಿಸಿರುವ ಬಂಧನದಲ್ಲಿ ಆಶ್ಚರ್ಯಕರವಾದುದೇನಿಲ್ಲ. ಕಮ್ಯೂನಿ ಸ್ಟರಾದ ನಮಗೆ ಒಂದೇ ಸಿದ್ಧಾಂತವಿದೆ—ಅದು ಮಾರ್ಕ್ಸ್‌ವಾದ—ಲೆನಿನ್‌ವಾದ. ನಮಗೆ ಒಂದೇ ಗುರಿಯಿದೆ—ಅದು ಸ ಮಾಜವಾದ ಮತ್ತು ಕಮ್ಯೂನಿಸಂ ಸ್ಥಾ ಪಿಸುವ ಗುರಿ. ಒಂದೇ ಸಿದ್ಧಾಂತ, ಒಂ ದೇ ಗುರಿ, ಅನೇಕ ಸಾಮಾನ್ಯ ಕಾರ್ಯ ಗಳು—ಇವುಗಳೇ ಅಂತರರಾಷ್ಟ್ರೀಯ ಕ ಮ್ಯೂನಿಸ್ಟ್ ಚಳವಳಿಯ ಐಕ್ಯತೆಯ ಬು ನಾದಿಯಾದೆ. ಆದ್ದರಿಂದಾಗಿ ಎಲ್ಲ ದೇಶಗಳ ಕಮ್ಯೂನಿಸ್ಟರೂ ತಮ್ಮ ಸಂಬಂ ಧಗಳನ್ನು ಸೌಹಾರ್ದಯುತ ಸಹಕಾರ ಮತ್ತು ಪರಸ್ಪರ ಅನುಭವದ ಆಧಾರದ ಮೇಲೆ ಕಲಿಯಲು ಯತ್ನಿಸುವ ಆಧಾರದ ಮೇಲೆ ನಿರ್ಮಿಸಿಕೊಂಡಿರುವುದು ಆಶ್ಚ ರ್ಯವೇನಲ್ಲ.

ಕಮ್ಯೂನಿಸ್ಟ್ ಚಳವಳಿಯು ಮಾನವ ಕೋಟಿಗೆ ಇತ್ತಿರುವ ಕಾಣಿಕೆಯಲ್ಲಿ ಶ್ರಮ ಜೀವಿ ಅಂತರರಾಷ್ಟ್ರೀಯತೆಯ ಭಾವನೆ ಅತಿ ಮೌಲ್ಯವಾದ ಅಂಶವೆಂದು ನಾವು ಪರಿಗಣಿಸುತ್ತೇವೆ.

ಉದಾಹರಣೆಗೆ, ಫ್ರಾನ್ಸಿನಲ್ಲಿರುವ ಇತ ರ ಎಲ್ಲ ಪಕ್ಷಗಳು ಅಲ್ಜೀರಿಯ ಸ್ವಾತಂ ತ್ರ್ಯ ಪ್ರೇಮಿಗಳನ್ನು ದಬ್ಬಾಳಿಕೆಯಿಂದ ಮರ್ದಿಸಬೇಕೆಂದು ಒತ್ತಾಯ ತರುತ್ತಿರು ವಲ್ಲಿ ಫ್ರೆಂಚ್ ಕಮ್ಯೂನಿಸ್ಟ್ ಪಾರ್ಟಿ ಯೊಂದೇ ಸ್ವಾತಂತ್ರ್ಯಕ್ಕಾಗಿ ಅಲ್ಜೀರಿಯ ಜನತೆಯ ಹೋರಾಟಕ್ಕೆ ಧೈರ್ಯವಾಗಿ ದೃ ಢವಾಗಿ ಬೆಂಬಲವಿತ್ತಿರುವುದು ಸಾಮಾನ್ಯ ವಿಷಯವಲ್ಲ. ಹೀಗೆ ಮಾಡುವುದರಿಂದ

ಫ್ರಾನ್ಸಿನ ಕಮ್ಯೂ ದೇಶದ ಅಭಿಮಾ ಕೊಂಡಿಲ್ಲ. ಅವ ಅತ್ಯುತ್ತಮ ಪುತ್ರ ಅಂತರರಾಷ್ಟ್ರೀಯತೆ ರಾಗಿಯೂ ಆಗಿದ್ದಾ ಸ್ಟ್ ಪಾರ್ಟಿಗಳ ಬ ವಾಗಿದೆ.

ಇಷ್ಟೆಲ್ಲ ಆದರೂ ಗಳು, ನಾವು ಶ್ರಮ ಯತೆಯನ್ನು ಬಿಡು ತ್ತಾರೆ. ಅದಕ್ಕೆ ಬ ನ್ನು ಬಲಗೊಳಿಸಲು ತ್ನಿಸುತ್ತೇವೆ.

ಪ್ರಸ್ತಾವನೆಯಾ ಪಾರ್ಟಿ ಘಟನೆಯ ಯೂ ಚರ್ಚೆಯಾ ದಲ್ಲಿ ಅನುಮೋದ ರೂಪದಲ್ಲಿ ಮತ್ತು ಅನೇಕ ಮುಖ್ಯ ಬ ಡಿದೆ. ಈ ಬದಲ ಟ್ಟಗಳಲ್ಲಿಯೂ ಪ ವಿಶಾಲಗೊಳಿಸಲು, ಜಾಪ್ರಭುತ್ವವನ್ನು ಣವನ್ನು ಮತ್ತು ನ ಮೂಹಿಕ ಪಕ್ಷವನ್ನಾ ಡಲು ಮಾಡಲಾಗಿ

ಘಟನೆಗೆ ದೃಢ ಅಕ್ಷರಶಹ ಹಾಗೂ ರ್ಟಿ ಐಕ್ಯತೆಯನ್ನು ತ್ತು ಅದರ ಸಾಮ ಖಂಡಿತ ಸಹಾಯ ಸಂಘಟನೆಯಲ್ಲಿನ ಬಲಹೀನತೆಗಳನ್ನು ಪ್ರಬಲವಾದ ಅಸ್ತ್ರ

ನಮ್ಮ ಕಾ

ಆದರೆ ನಮ್ಮ ಪ ಪಾರ್ಟಿಯಾಗಿ ಬೆ ನೆಯಷ್ಟೇ ಸಾಲದ ಕಾರ್ಯಗಳ ಸ್ವಭ ತಿಳುವಳಿಕೆ ಇರುವ

ಪಾರ್ಟಿ ಘಟ ಸಮಾಜವಾದ ನ್ನು ಸಾಧಿಸುವುದ ಗುರಿಯಾಗಿದೆ ಎ

"ಈ ಗುರಿಗಳ ಜನತೆಯನ್ನು ತ ಪ್ರಶ್ನೆಗಳನ್ನು ಗ ಭಾರತ ಕಮ್ಯೂ ಪ್ರೀಯ ಸ್ವಾತಂತ ಅದನ್ನು ಬಲಗೊ ದಾರಿ ಬಂಡವಾಳ ಮುರಿಯುವುದಕ ವಾಳದ ಹಿಡಿತವ ದಕ್ಕಾಗಿ, ರಾಷ್ಟ್ರ ಗೊಳಿಸುವುದಕ್ಕಾ ನ್ನು ಸರ್ವ ವ್ಯಾ ಕ್ಕಾಗಿ, ಮತ್ತು

...ಮೃತಸರ ಅಧಿವೇಶನ ★

ಅಜಯ ಘೋಷ್

...ವನ್ನು ನಿರ್ಮೂಲಗೊಳಿಸುವುದಕ್ಕಾಗಿ ಮತ್ತು ನಮ್ಮ ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ವಿದೇಶೀ ಆಳ್ವಿಕೆಯ ದುಷ್ಪರಂಪರೆಗಳನ್ನು ತೊಡೆದು ಹಾಕುವುದಕ್ಕಾಗಿ, ಹೋರಾಟದಲ್ಲಿ ದೇಶದಲ್ಲಿರುವ ಎಲ್ಲ ದೇಶಾಭಿಮಾನಿ ಮತ್ತು ಪ್ರಜಾ ಪ್ರಭುತ್ವ ಶಕ್ತಿಗಳನ್ನು ಒಂದುಗೂಡಿಸಲು ಮತ್ತು ನಾಯಕತ್ವ ಕೊಡಲು ಯತ್ನಿಸುತ್ತದೆ." ಎಂದೂ ಘಟನೆಯ ಪ್ರಸ್ತಾವನೆಯಲ್ಲಿ ಹೇಳಲಾಗಿದೆ.

ಇವು ನಿಜವಾದ ರಾಷ್ಟ್ರೀಯ ಕಾರ್ಯಗಳಾಗಿವೆ. ಆದ್ದರಿಂದಾಗಿ ಅವುಗಳ ಆಧಾರದ ಮೇಲೆ ಮಾತ್ರವೇ ವಿಶಾಲವಾದ ರೀತಿಯಲ್ಲಿ ಜನತೆಯ ಐಕ್ಯತೆಯನ್ನೂ, ನಿಜವಾದ ರಾಷ್ಟ್ರೀಯ ಐಕ್ಯತೆಯನ್ನು ನಿರ್ಮಿಸಲು ಸಾಧ್ಯ.

ಜನತೆಯ ಐಕ್ಯತೆಗೆ ಆಧಾರ

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ನಮ್ಮ ಜನತೆಯು ಸ್ವಾತಂತ್ರ್ಯಕ್ಕಾಗಿ ಆಕ್ರಮಣ ಮಾಡಿದ್ದ ಬ್ರಿಟಿಷ್ ಸೇನೆಗಳನ್ನು ಹೊಡೆದೋಡಿಸುವುದಕ್ಕಾಗಿ ಒತ್ತಾಯ ಮಾಡುತ್ತಿದ್ದರು. ಆದ್ದರಿಂದಾಗಿ ಅಂತ್ಯವಾಗಿ ಹೊರಟ ಘೋಷಣೆ :- ಭಾರತದಿಂದ ತೊಲಗಿ ಎಂಬುದಾಗಿತ್ತು, ಈ ಘೋಷಣೆಯ ಆಧಾರದ ಮೇಲೆ ವಿಶಾಲವಾದ ಜನತೆಯ ಐಕ್ಯತೆ ಏರ್ಪಟ್ಟಿತು.

ಸ್ವಾತಂತ್ರ್ಯ ನಂತರದಲ್ಲಿ ನಮ್ಮ ಜನತೆಯ ಆಶಯವು ಕಷ್ಟಪಟ್ಟು ಸಂಪಾದಿಸಿದ ಸ್ವಾತಂತ್ರ್ಯವನ್ನು ಬಲಗೊಳಿಸುವುದಾಗಿದೆ. ಭಾರತವು ಪ್ರಪಂಚ ರಾಷ್ಟ್ರಗಳ ಕೂಟದಲ್ಲಿ ಹೆಮ್ಮೆಯ ಹಾಗೂ ಗೌರವ ಸ್ಥಾನವನ್ನು ಪಡೆಯಬೇಕೆಂದು ಅವರು ಆಶಿಸುತ್ತಿದ್ದಾರೆ. ರಾಷ್ಟ್ರೀಯ ಪುನರ್ನಿರ್ಮಾಣ ಕಾರ್ಯವನ್ನು ಶೀಘ್ರಗತಿಯಿಂದ ಸಾಗಿಸಬೇಕೆಂದೂ ಮತ್ತು ಅದರ ಮಾರ್ಗದಲ್ಲಿ ಬರುವ ಎಲ್ಲ ಅಡ್ಡಿ ಆತಂಕಗಳನ್ನು ತೊಡೆದು ಹಾಕಬೇಕೆಂದೂ ಅವರು ಆಶಿಸುತ್ತಾರೆ. ಸಮಾಜವಾದೀ ಭಾವನೆಯು ಹೆಚ್ಚು ಹೆಚ್ಚಾಗಿ ಜನಪ್ರಿಯವಾಗುತ್ತಿರುವುದು ಜನತೆಯಲ್ಲಿ ಬೆಳೆಯುತ್ತಿರುವ ಜಾಗೃತಿಯನ್ನೂ, ಸರ್ವ ವ್ಯಾಪಿಯಾದ ರಾಷ್ಟ್ರೀಯ ಮುನ್ನಡೆಯು ಸಮಗ್ರವಾದ ಸುಧಾರಣೆಗಳ ಆಧಾರದ ಮೇಲೆ ಮಾತ್ರ ಸಾಧ್ಯವೆಂದೂ ಅದು ತೋರಿಸುತ್ತದೆ.

ನಿಜವಾದ ರಾಷ್ಟ್ರೀಯ ಐಕ್ಯತೆಯನ್ನು ಈ ರಾಷ್ಟ್ರೀಯ ಆಶಯಗಳನ್ನು ವ್ಯಕ್ತಗೊಳಿಸುವಂಥ ನೀತಿಗಳ ಆಧಾರದ ಮೇಲೆ ಮಾತ್ರ ನಿರ್ಮಿಸಲು ಸಾಧ್ಯ.

ಭಾರತದ ವಿದೇಶಾಂಗ ನೀತಿಗೆ ಬಹುಶೇಕ ಜನತೆಯ ಬೆಂಬಲವಿದೆ ಮತ್ತು ಅದು ನಮ್ಮ ರಾಷ್ಟ್ರೀಯ ಹಿತಗಳಿಗೆ ಅನುಗುಣವಾಗಿರುವುದರಿಂದಲೇ ಈ ಐಕ್ಯತೆಯನ್ನು ನಿರ್ಮಿಸಲು ಸಾಧ್ಯವಾಯಿತು. ನಮ್ಮ ಶಾಂತಿ ನೀತಿ, ನಮ್ಮ ದೇಶದ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯಗಳಿಗೆ ದಕ್ಕೆ ತರುವಂಥ ಯುದ್ಧ ಒಪ್ಪಂದಗಳಿಗೆ ನಮ್ಮ ವಿರೋಧ, ಏಷ್ಯ ಮತ್ತು ಆಫ್ರಿಕಾ ಜನತೆಗಳೊಂದಿಗೆ ನಮ್ಮ ಸೌಹಾರ್ದತೆ— ಇವೆಲ್ಲವನ್ನು ನಮ್ಮ ಜನತೆ ಸ್ವಾಗತಿಸಿದ್ದಾರೆ. ಸಮಾಜವಾದಿ ಜಗತ್ತಿನ ರಾಷ್ಟ್ರಗಳೊಂದಿಗೆ ನಮ್ಮ ಸ್ನೇಹವನ್ನು ಬಲಗೊಳಿಸಲು ಮತ್ತು ಅವುಗಳೊಂದಿಗೆ ಆರ್ಥಿಕ ಸಹಕಾರ ಸಂಬಂಧಗಳನ್ನು ನಿರ್ಮಿಸಲು ನಮ್ಮ ಯತ್ನಕ್ಕೆ ಎಲ್ಲ ದೇಶಾಭಿಮಾನಿ ವಿಭಾಗಗಳೂ ಬೆಂಬಲವನ್ನಿತ್ತಿವೆ, ಯಾಕೆಂದರೆ ಅವು ನಮ್ಮ ಸ್ವಾತಂತ್ರ್ಯವನ್ನು ಬಲಗೊಳಿಸಲು ಮತ್ತು ರಾಷ್ಟ್ರೀಯ ಆರ್ಥಿಕವನ್ನು ಅಭಿವೃದ್ಧಿಗೊಳಿಸಲು ಸಹಾಯಕವಾಗಿವೆ.

ನಮ್ಮ ವಿದೇಶಾಂಗ ನೀತಿಯು ಎಂದಿನವರೆಗೆ ರಾಷ್ಟ್ರೀಯ ಆಶಯವನ್ನು ಪ್ರತಿಬಿಂಬಿಸುವುದೋ, ನಮ್ಮ ನಿಜವಾದ ಹಿತಗಳನ್ನು ಸಾಧಿಸುವುದೋ ಅಲ್ಲಿಯವರೆಗೆ ಆ ನೀತಿಯ ಹಿಂಬದಿಯಲ್ಲೇ ರಾಷ್ಟ್ರೀಯ ಐಕ್ಯತೆ ಇರುವುದು.

ಒಡಕು ಮತ್ತು ಅನೈಕ್ಯತೆಗೆ- ಜವಾಬ್ದಾರರಾರು?

ಕೆಲವು ಆಂತರಿಕ ಪ್ರಶ್ನೆಗಳ ಮೇಲೂ ಸಹ ವಿಶಾಲವಾದ ಜನ ಸಮೂಹದ ಐಕ್ಯತೆಯು ಅನಿರೀಕ್ಷಿತವಾಗಿ ಬರುತ್ತದೆ. ಜೀವ ವಿಮಾ ರಾಷ್ಟ್ರೀಕರಣವಾದಾಗ, ಶಾಸನ ಸಭೆಗಳ ತೀರ್ಮಾನದ ಆಧಾರದ ಮೇಲೆ ಪರಿಹಾರ ಕೊಡಬೇಕೆಂದು ಘಟದೆಯನ್ನು ತಿದ್ದುಪಡಿ ಮಾಡಿದಾಗ, ದ್ವಿತೀಯ ಪಂಚವಾರ್ಷಿಕ ಯೋಜನೆಯ ಗುರಿ; ಉದ್ದೇಶಗಳನ್ನು ರೂಪಿಸಿದಾಗ, ಸಾಕಷ್ಟು ರಾಷ್ಟ್ರೀಯ ಐಕ್ಯತೆ ಇದ್ದಿತು.

ರಾಷ್ಟ್ರೀಯ ನೀತಿಗಳು ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಬಲ್ಲವು ಎಂಬುದನ್ನು ಇವು ತೋರಿಸುತ್ತದೆ. ರಾಷ್ಟ್ರೀಯ ಕಾರ್ಯಭಾರಗಳನ್ನು ನಡೆಸಿಕೊಂಡು ಹೋಗಲು ಅಡ್ಡಿ ಬರುವಂಥ ನೀತಿಗಳ ಆಧಾರದ ಮೇಲೆ ರಾಷ್ಟ್ರೀಯ ಐಕ್ಯತೆ ಏರ್ಪಡದು. ಪಂಡಿತ ನೆಹರೂರವರು ಎಷ್ಟೇ ಒತ್ತಾಯ ಪಡಿಸಿದರೂ, ದೇಶದಲ್ಲಿ ಅಂಥ ಐಕ್ಯತೆ ಇಲ್ಲ, ಇದಕ್ಕೆ ಕಾರಣವನ್ನು ಸರಕಾರದ ನೀತಿಗಳಲ್ಲೇ ಹುಡುಕಬೇಕಾಗಿದೆ, ಮುಖ್ಯವಾದ ವಿಷಯಗಳಲ್ಲಿ ಜನ ವಿರೋಧೀ ನೀತಿ, ರಾಷ್ಟ್ರೀಯ ಆಶಯಗಳು ಮತ್ತು ರಾಷ್ಟ್ರೀಯ ಅಗತ್ಯತೆಗಳನ್ನು ಪ್ರತಿ ಬಿಂಬಿಸದಂಥ ಪ್ರಜಾ ಪ್ರಭುತ್ವ ವಿರೋಧಿ ನೀತಿಗಳಲ್ಲಿ ಹುಡುಕಬೇಕಾಗಿದೆ.

ಆದ್ದರಿಂದಾಗಿ ರಾಷ್ಟ್ರೀಯ ಕಾರ್ಯಗಳನ್ನು ನಡೆಸಿರೆಂದು ಹೋಗುವುದನ್ನು ಕುಂಠಿತಗೊಳಿಸುವಂಥ ಸರಕಾರದ ನೀತಿಗಳ ವಿರೋಧವಾಗಿ ದೃಢವಾದ ಹೋರಾಟವನ್ನು ನಡೆಸದಿದ್ದಲ್ಲಿ, ಜನತೆಯಲ್ಲಿ ಐಕ್ಯತೆಯನ್ನು ನಿರ್ಮಿಸಲು ಸಾಧ್ಯವಿಲ್ಲ. ದೇಶದಲ್ಲಿ ಒಡಕು ಮತ್ತು ಅನೈಕ್ಯತೆಗೆ ನಾವು ಕಾರಣರೆಂದು ಹೇಳುವವರು, ನಿಜಾಂಶವನ್ನು ಬಚ್ಚಿಡಲು ಮತ್ತು ಜನತೆಯನ್ನು ಅಂಥ ಹೋರಾಟಗಳನ್ನು ನಡೆಸುವುದರಿಂದ ದೂರವಿರಿಸಲು ಯತ್ನಿಸುವವರಾಗಿದ್ದಾರೆ.

ಸರಿಯಾದ ನೀತಿಗಳಿಗಾಗಿ ಹೋರಾಟ

ನಮ್ಮ ಕ್ರಾಂತಿಯ ಪ್ರಸ್ತುತ ಘಟ್ಟದಲ್ಲಿ ಪಾರ್ಟಿಯ ಸಾಮಾನ್ಯ ಕಾರ್ಯಗಳ ಬಗ್ಗೆ ಘಟನೆಯ ಪ್ರಸ್ತಾವನೆಯಲ್ಲಿ ಕೊಟ್ಟಿರುವ ತಿಳುವಳಿಕೆಯನ್ನು, ವಿಶೇಷ ಅಧಿವೇಶನದ ರಾಜಕೀಯ ನಿರ್ಣಯದಲ್ಲಿ ನಿರ್ದಿಷ್ಟವಾಗಿ ವಿವರಿಸಲಾಗಿದೆ.

ಆರಂಭದಲ್ಲಿ, ಈ ನಿರ್ಣಯವು ಹೊಸ ತಾಂತ್ರಿಕ ಧೋರಣೆಯನ್ನು—ಅಂದರೆ ಪಾಲ್‌ಘಾಟ್ ಅಧಿವೇಶನದಲ್ಲಿ ಎರಡು ವರ್ಷಗಳ ಹಿಂದೆ ಮಾಡಿದ ಧೋರಣೆಯಿಂದ ಬೇರೆಯಾದುದನ್ನು ನಿರೂಪಿಸಿಲ್ಲ ಎಂದು ಹೇಳುವುದಗತ್ಯವಾಗಿದೆ. ಆ ಧೋರಣೆಯು ಸರಿಯಾಗಿದೆ ಎಂದು ಅನುಭವವೇ ಸಾರಿದೆ. ಪರಿಸ್ಥಿತಿಯ ಮೂಲ ಸ್ವರೂಪಗಳು, ಸರಕಾರದ ಮೂಲ ನೀತಿಗಳು, ಪಾರ್ಟಿಯ ಮೂಲ ಕಾರ್ಯಗಳು ಮತ್ತು ಪಾತ್ರ ಪಾಲಾಘಾಟ್‌ನಲ್ಲಿದ್ದಂತೆ ಅದೇ ಆಗಿರುವುದರಿಂದ ಯಾವ ಮುಖ್ಯ ವಿಷಯಗಳ ಮೇಲೂ ನಾವು ಅದರಿಂದ ದೂರ ಸರಿದಿಲ್ಲ.

ಉದಾಹರಣೆಗೆ, ಪಾಲಘಾಟ್‌ನಲ್ಲಿ ಮತ್ತು ನಂತರದಲ್ಲಿ, ಸರಿಯಾದ ನೀತಿಗಳಿಗಾಗಿ ಮತ್ತು ಜನತೆಯ ತಕ್ಷಣದ ಹಿತಗಳನ್ನು ರಕ್ಷಿಸುವುದಕ್ಕಾಗಿ ಹೋರಾಟ ನಡೆಸುವುದರ ಮುಖ್ಯತ್ವವನ್ನು ಒತ್ತಿ ಹೇಳಿದ್ದೇವೆ. ಆ ಕಾರ್ಯವು ಮುಂದುವರಿಯುತ್ತಿರುವುದಷ್ಟೇ ಅಲ್ಲ, ಇನ್ನೂ ಹೆಚ್ಚು ಮಹತ್ವವಾಗಿದೆ. ಸರಕಾರವು ಅನುಸರಿಸಿದ ಅನೇಕ ನೀತಿಗಳು, ಯಾವ ನೀತಿಗಳ ಪರಿಣಾಮದ ಮೇಲೆ ಪಾಲಘಾಟ್ ಅಧಿವೇಶನವು ಎಚ್ಚರಿಕೆ ಇದ್ದಿತೋ ಅವು, ಯೋಜನೆಯ ಗುರಿಗಳನ್ನು ಆತಂಕಕ್ಕೆ ಗುರಿ ಮಾಡಿರುವುದೇ ಅಲ್ಲದೆ, ಜನತೆಯ ಮೇಲೆ ಅಪಾರವಾದ ಸಂಕಷ್ಟವನ್ನು ಹೊರಿಸಿದೆ. ಆದ್ದರಿಂದಾಗಿ, ಬೃಹದಾಕಾರವಾಗಿ ಬೆಳೆಯುತ್ತಿರುವ ಅತೃಪ್ತಿಯು ಜನತೆಯ ಜಾಗೃತಿಯಲ್ಲಿ, ಅವರ ಹೋರಾಟಗಳಲ್ಲಿ, ಕಾಂಗ್ರೆಸ್ಸಿನ ಗುತ್ತೇದಾರಿ ಅಧಿಕಾರವನ್ನು ಬಲಹೀನಗೊಳಿಸುವವರಲ್ಲಿ, ಅವರ ಆಶಯದಲ್ಲಿ ಅದು ವ್ಯಕ್ತಗೊಳ್ಳುತ್ತಿದೆ ಎಂಬುದರಲ್ಲಿ ಆಶ್ಚರ್ಯವೇನಿಲ್ಲ.

ಕಮ್ಯೂನಿಸ್ಟ್ ಪಾರ್ಟಿಯು ಕೇರಳ ರಾಜ್ಯದಲ್ಲಿ ಸರಕಾರದ ನೇತೃತ್ವದಲ್ಲಿರುವುದರಿಂದ, ಸರಕಾರದ ಜನವಿರೋಧಿ ನೀತಿಗೂ ಮತ್ತು ಕ್ರಮಗಳ ವಿರುದ್ಧ ಹೋರಾಟ ಮತ್ತು ಅವುಗಳಿಗೆ ತೀವ್ರವಾದ ಪ್ರತಿಭಟನೆ ಇವು ಯಾವ ರೀತಿಯಲ್ಲಿ ಮುಖ್ಯತ್ವವನ್ನು ಕಳೆದುಕೊಂಡಿವೆ ಎಂದು ಹೇಳುವುದು ಸರಿಯಲ್ಲ. ಅದಕ್ಕೆ ಬದಲಾಗಿ, ಈ ಹೋರಾಟದಲ್ಲಿ ಕೇರಳ ಸರಕಾರವೇ ಒಂದು ದೊಡ್ಡ ಅಸ್ತ್ರವಾಗಿದೆ, ರಾಷ್ಟ್ರೀಯ ಪುನರ್ನಿರ್ಮಾಣದ ಹಿತಗಳಿಗಾಗಿ, ಅದರ ಆಧಾರದ ಮೇಲೆ ಜನತೆಯನ್ನು ಒಂದುಗೂಡಿಸುವುದಕ್ಕಾಗಿ, ದೇಶಾದ್ಯಂತ ಜನಜಾಗೃತಿಯನ್ನು ಹೆಚ್ಚಿಸಲು ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪುರೋಗಾಮಿ ನೀತಿಗಳಿಗಾಗಿ ಹೋರಾಟವನ್ನು ಬಲಗೊಳಿಸುವುದಕ್ಕಾಗಿ, ಪಾರ್ಟಿಯು ಮಂಡಿಸಿರುವ ನೀತಿಗಳು ಸರಿಯಾದುವೆಂದು ಪ್ರದರ್ಶನದಲ್ಲಿ ಪ್ರಬಲವಾದ ಅಸ್ತ್ರವಾಗಿದೆ.

ಕೇರಳದಲ್ಲಿ ಆರಂಭವಾಗಿರುವ ಕ್ರಮವನ್ನು ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಸಂಪರ್ಕವನ್ನು ಬೆಳೆಸಿ ಮುಂದುವರಿಸಲು ಮತ್ತು ಕಾಂಗ್ರೆಸ್ಸಿನ ಗುತ್ತೇ ಅಧಿಕಾರವನ್ನು ಇನ್ನಷ್ಟು ದುರ್ಬಲ ಮಾಡಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಪ್ರಜಾಪ್ರಭುತ್ವ ಸರಕಾರಗಳನ್ನು ಸ್ಥಾಪಿಸಲು ನಾವು ಯತ್ನಿಸುತ್ತಿದ್ದೇವೆ ಮತ್ತು ಯತ್ನಿಸುತ್ತೇವೆ. ಈ ಹೋರಾಟದಲ್ಲಿನ ಪ್ರತಿಯೊಂದು ವಿಜಯವೂ ನಮ್ಮ ರಾಷ್ಟ್ರೀಯ ರಾಜಕೀಯ ಜೀವನದಲ್ಲಿ ಕಾಂಗ್ರೆಸ್ಸಿನ ಒಳಗೂ ಹಾಗೂ ಹೊರಗೂ ಪ್ರಜಾಪ್ರಭುತ್ವ ಮತ್ತು ಸಮಾಜವಾದೀ ಶಕ್ತಿಗಳನ್ನು ಬಲಗೊಳಿಸಲು ಮತ್ತು ಯಾವ ನೀತಿಗಳ ಆಧಾರದ ಮೇಲೆ ನಿಜವಾದ ಜನತೆಯ ಐಕ್ಯತೆಯನ್ನು ಸಾಧಿಸಲು ಆಗುವುದೋ ಅದು ವಿಜಯ ಗಳಿಸಲು ಸಹಾಯಕವಾಗಲು ಮತ್ತು ಇಡೀ ದೇಶವು ಮುನ್ನಡೆಯಲು ಸಹಾಯವಾಗುತ್ತದೆ.

ಪಾರ್ಟಿಯ ಧೋರಣೆಯ ಬಗ್ಗೆ ಪಾಲಘಾಟ್‌ನಲ್ಲಿ ಮಾಡಿದ ನಿರೂಪಣೆಯು ಹಾಗೆಯೇ ಇದ್ದರೂ, ಕಳೆದ ಎರಡು ವರ್ಷಗಳಲ್ಲಿ ಯಾವ ಬದಲಾವಣೆಯು ಆಗಿಲ್ಲ ಎಂದು ಹೇಳುವುದು ಸರಿಯಲ್ಲ. ಬದಲಾವಣೆಗಳು ಆಗಿವೆ ಮತ್ತು ಅಮೃತಸರದಲ್ಲಿ ಅನುಮೋದಿಸಲಾದ ರಾಜಕೀಯ ನಿರ್ಣಯವು, ಈ ಬದಲಾವಣೆಗಳನ್ನು ಗಮನಿಸಿ ಪಾಲಘಾಟ್‌ನ ತಿಳುವಳಿಕೆಯನ್ನು ಮುಂದುವರಿಸುತ್ತಾ, ಅನೇಕ ಹೊಸ ಕಾರ್ಯಗಳನ್ನು ನಿರೂಪಿಸುತ್ತದೆ.

ಶಾಂತಿ ಚಳವಳಿಯನ್ನು ತೀವ್ರಗೊಳಿಸಿ

ಶಾಂತಿ ಶಕ್ತಿಗಳು ಗಳಿಸಿರುವ ಅದ್ಭುತ ವಿಜಯಗಳನ್ನು ಒತ್ತಿ ಹೇಳುತ್ತಾ, ಮತ್ತು ಆಫ್ರೋ-ಏಷ್ಯನ್ ಸೌಹಾರ್ದವು ಬೆಳೆಯುತ್ತಿರುವುದರಿಂದ ಸಾಮ್ರಾಜ್ಯವಾದೀ ಪದ್ಧತಿಯಲ್ಲಿ ಬಿಕ್ಕಟ್ಟನ್ನು ತೀವ್ರಗೊಳಿಸಲು ಪ್ರಬಲವಾದ ಅಂಶವೆಂದು ಒತ್ತಿ ಹೇಳುತ್ತಾ, ನಿರ್ಣಯವು ಶಾಂತಿ ಹೋರಾಟದಲ್ಲಿ ಪಾರ್ಟಿಯ ನಿರ್ಲಕ್ಷ್ಯವನ್ನು ಗಮನಕ್ಕೆ ತರಲಾಗಿದೆ.

ಯುದ್ಧದ ಅಪಾಯವನ್ನು ಕಡೆಗಣಿಸುವ ಮತ್ತು ಸಾಮ್ರಾಜ್ಯವಾದಿಯನ್ನು ಸಂಪೂರ್ಣವಾಗಿ ಮರೆಯುವ ಪ್ರವೃತ್ತಿಯು ನಮ್ಮ ಪಾರ್ಟಿಯಲ್ಲಿದೆ ಎಂದು ಒಪ್ಪಿಕೊಳ್ಳಬೇಕಾಗಿದೆ. ಆಂತರಿಕ ವಿಷಯಗಳಲ್ಲೇ ನಾವು ಮುಳುಗಿರುವುದರಿಂದ ನಮ್ಮ ಪ್ರಪೋಗಂಡ ಮತ್ತು ಪ್ರಚಾರದಲ್ಲಿ ಸಾಮ್ರಾಜ್ಯವಾದದ ಭೀತಿಯ ಪ್ರಶ್ನೆ ಕಾಣಬರುವುದೇ ಇಲ್ಲ. ಕೇಂದ್ರ ಸಮಿತಿಯ ಸದಸ್ಯರುಗಳೇ, ಕೈರೋ ಸಮ್ಮೇಳನ, ನ್ಯೂಕ್ಲಿಯರ್ ಯುದ್ಧದ ಭೀತಿ, ಅಲ್ಜೀರಿಯದಲ್ಲಿ ನಡೆಯುತ್ತಿರುವ ಸಮರ, ಇಂಡೊನೇಷಿಯಾದಲ್ಲ ನಡೆಯುತ್ತಿರುವ ಆಪತ್ತು, ರಾಜ್ಯಗಳಲ್ಲಿ ನಡೆಸಲಾಗುವ ಚಳವಳಿ- ವಿಶಾಲವಾದ ಐಕ್ಯತೆ ಇರುವ ಈ ಪ್ರಶ್ನೆಗಳನ್ನು ತೆಗೆದುಕೊಳ್ಳದೆ ಇರುವುದರಿಂದ ಅವರೇ ಕೆಟ್ಟ ಮೇಲ್ಪಂಕ್ತಿ ಹಾಕಿದ್ದಾರೆ.

ನಮ್ಮ ವಿದೇಶಾಂಗ ನೀತಿಯನ್ನು ವ್ಯಾವಹಾರಿಕವಾಗಿ ಗೆಗೆದುಕೊಳ್ಳುವ, ಅದರಲ್ಲಿರುವ ನ್ಯೂನತೆಗಳನ್ನು ಕಡೆಗಣಿಸುವ ಮತ್ತು ಅದನ್ನು ಬದಲಿಸಲು ಯತ್ನಿಸುತ್ತಿರುವವರ ಚಟುವಟಿಕೆಗಳನ್ನು ಅಲಕ್ಷಿಸುವ ಪ್ರವೃತ್ತಿಯೂ ಇದೆ. ಶಾಂತಿ ಹೋರಾಟವನ್ನು ಕುರಿತು ಗೇಲಿಮಾಡುವ ಪ್ರವೃತ್ತಿ ... ಎಡಪಕ್ಷಗಳಿಂದ ನಮ್ಮ ನಿಲುವನ್ನು ಪ್ರತ್ಯೇಕಿಸುವುದರಲ್ಲಿ ಸಾಧ್ಯ...

(ನೇ ಪುಟ ನೋಡಿ)

ಮಂಗಳೂರು ಪತ್ರ

ಕಮ್ಯೂನಿಸ್ಟ್ ಪಾರ್ಟಿಯ ಸಾರ್ವಜನಿಕ ಸಭೆ

ಮೈಸೂರು ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ಈ ಬಗ್ಗೆ ಜನತೆಯ ಕರ್ತವ್ಯವನ್ನು ಒತ್ತಿ ಹೇಳಲು ಮತ್ತು ಅಮೃತಸರದಲ್ಲಿ ಜರಗಿದ ಕಮ್ಯೂನಿಸ್ಟ್ ಪಾರ್ಟಿಯ ವಿಶೇಷ ಅಧಿವೇಶನದ ನಿರ್ಧಾರಗಳನ್ನು ವಿವರಿಸಲು ಕಳೆದ ತಾ|| 18 ರಂದು ಕಮ್ಯೂನಿಸ್ಟ್ ಪಾರ್ಟಿಯ ಮಂಗಳೂರು ಸಮಿತಿಯ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ಕೇಂದ್ರ ಮೈದಾನಿನಲ್ಲಿ ನಗರ ಸಭಾ ಸದಸ್ಯ ಶ್ರೀ ಬಿ. ಲಿಂಗಪ್ಪ ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಶ್ರೀ ಬಿ. ನಾರಾಯಣರು ಸಭೆಯ ಉದ್ದಿಶ್ಯವನ್ನು ವಿವರಿಸಿ ಸಭಿಕರನ್ನು ಸ್ವಾಗತಿಸಿದರು.

ಬಳಿಕ ಕಮ್ಯೂನಿಸ್ಟ್ ಪಾರ್ಟಿಯ ಜಿಲ್ಲಾ ಸಮಿತಿಯ ಸದಸ್ಯ ಶ್ರೀ ಕೆ. ಮೋನಪ್ಪಶೆಟ್ಟರು ಇಂದು ಮೈಸೂರಿನಲ್ಲಿ ಕಾಂಗ್ರೆಸ್ ಪಕ್ಷದೊಳಗೆ ಅಧಿಕಾರಕ್ಕಾಗಿ ನಡೆಯುತ್ತಿರುವ ತಿಕ್ಕಾಟಗಳನ್ನು ಬಯಲಿಗೆಳೆದು ಕಾಂಗ್ರೆಸಿನೊಳಗಣ ಈ ಕಚ್ಚಾಟಗಳಿಂದ ಸ್ವಾರ್ಥ, ಅಧಿಕಾರ ಲಾಲಸೆ, ಲಂಚಗುಳಿತನ, ಕುಲಪಕ್ಷಪಾತಗಳು ದಿನೇ ದಿನೇ ಬೆಳೆಯುತ್ತಿದ್ದು ಆಡಳಿತೆಯು ಶಿಥಿಲವಾಗುತ್ತಿದೆಯೆಂದೂ, ಜನ ಸಾಮಾನ್ಯರ ದಿನ ನಿತ್ಯದ ಸಮಸ್ಯೆಗಳಿಗೆ ಗಮನ ಕೊಡಲಾಗುತ್ತಿಲ್ಲವೆಂದು ಹೇಳಿದರು.

ನಂತರ ನಗರ ಸಮಿತಿಯ ಕಾರ್ಯದರ್ಶಿ ಶ್ರೀ ಎ. ಶಾಂತಾರಾಂ ಪೈಯವರು ಮಾತನಾಡಿ ಕಾಶ್ಮೀರದಿಂದ ಕನ್ಯಾಕುಮಾರಿ ತನಕ ಕಾಂಗ್ರೆಸ್ ಪಾಳೆಯದಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿರುವ ಕಚ್ಚಾಟವನ್ನು ಬಯಲಿಗೆಳೆದರು. ಒರಿಸ್ಸಾದಲ್ಲಿ ತಮ್ಮ ಅಧಿಕಾರ ಉಳಿಸಿಕೊಳ್ಳಲು ಕಾಂಗ್ರೆಸ್ ಸಂಸ್ಥೆ ಎಂಥ ಹೇಸಿ ಕೆಲಸ ಮಾಡಲಿಕ್ಕೂ ಹಿಂಜರಿದಿಲ್ಲ. ಪಂಜಾಬ್‌ದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲದ ವಿರುದ್ಧ ಕಾಂಗ್ರೆಸಿಗರೇ ಲಂಚಗೂಳಿತನ ಕುಲಪಕ್ಷಪಾತಗಳ ಆರೋಪ ಹೊರಿಸಿದ್ದಾರೆ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸಿಗರೆ ಕಾಂಗ್ರೆಸಿಗರ ಕೊಲೆ ನಡೆಸುತ್ತಿದ್ದಾರೆ. ಬಂಗಾಳದಲ್ಲಿ ಸರಕಾರದ ಪ್ರತಿಗಾಮಿ ನೀತಿಯ ವಿರುದ್ಧ ಮಂತ್ರಿಯೊಬ್ಬರು ತಮ್ಮ ಸ್ಥಾನಕ್ಕೆ ರಾಜಿ ಕೊಡಬೇಕಾಯಿತು. ಆಂಧ್ರದ ಕಾಂಗ್ರೆಸ್ ಬಿಕ್ಕಟ್ಟು ಮಿತಿ ಮೀರಿದೆ ಎಂಬುದನ್ನು ವಿವರಿಸಿ ಮೈಸೂರಿನಲ್ಲಿ ಇಂದು ಒಂದು ಭದ್ರ ಸರಕಾರ ರಚಿಸಲು ಸಂಪೂರ್ಣ ಬಹುಮತವಿರುವ ಕಾಂಗ್ರೆಸ್ ಪಕ್ಷಕ್ಕೆ ಅಸಾಧ್ಯವಾಗಿದೆ. ಪ್ರತಿಯೊಬ್ಬ ಎಂ.ಎಲ್.ಎ ಯೂ ಮಂತ್ರಿಯಾಗಲು ಇಚ್ಛಿಸುತ್ತಾನೆ. ಎಂದಿತ್ಯಾದಿ ಹೇಳಿ ಕೇರಳ ಸರಕಾರ ಕಳೆದ 14 ತಿಂಗಳುಗಳಲ್ಲಿ ಮಾಡಿದ ಸುಧಾರಣೆಗಳನ್ನು ವಿವರಿಸಿ ಜನತೆ ಒಂದಾಗಿ ಕಾಂಗ್ರೆಸ್ಸಿನ ಪ್ರತಿಗಾಮಿ ನೀತಿಗಳನ್ನು ಪ್ರತಿಭಟಿಸಬೇಕು ಎಂದರು.

ಅಧ್ಯಕ್ಷರ ಭಾಷಣ ನಂತರ ಸಭೆ ಕೊನೆಗೊಂಡಿತು.

ಬೀಡಿ ಮಜೂರರ ಮಹಾ ಸಭೆ

ದ. ಕ. ಬೀಡಿ ಎಂಡ್ ಟೊಬೆಕೊ ಲೇಬರ್ ಯೂನಿಯನಿನ 22ನೇ ವಾರ್ಷಿಕ ಮಹಾ ಸಭೆಯು ಕಳೆದ ತಾ|| 15ರಂದು ಶ್ರೀ ಕೆ. ಮೋನಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ವಾರ್ಷಿಕ ವರದಿ ಲೆಕ್ಕಪತ್ರಗಳನ್ನು ಸ್ವೀಕರಿಸಿದ ನಂತರ ಮುಂದಿನ ವರುಷಕ್ಕೆ ಶ್ರೀ ಕೆ. ಆನಂದ (ಅಧ್ಯಕ್ಷ) ಶ್ರೀ ಪಿ. ಚಂದ್ರಪ್ಪ (ಉಪಾಧ್ಯಕ್ಷ) ಶ್ರೀ ಯು. ಕೃಷ್ಣ (ಕಾರ್ಯದರ್ಶಿ) ಶ್ರೀ ಎಂ. ಕೃಷ್ಣ ಪೈ (ಜತೆ ಕಾರ್ಯದರ್ಶಿ) ಶ್ರೀ ಯು. ಮೋನಪ್ಪ (ಕೋಶಾಧಿಕಾರಿ) ಇವರು ಮತ್ತು 15 ಮಂದಿ ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಪ್ರಾಂತದ ಬೀಡಿ ಮಜೂರರ ಸಮ್ಮೇಳನ ಸ್ವೀಕರಿಸಿದ ಠರಾವುಗಳನ್ನು ಮಾನ್ಯ ಮಾಡುವಂತೆ ಸರಕಾರವನ್ನೂ, ಮಾಲಿಕರನ್ನೂ ಒತ್ತಾಯಿಸುವ ಠರಾವನ್ನು ಸಭೆಯಲ್ಲಿ ಸ್ವೀಕರಿಸಲಾಯಿತು.

ಹೋಟೆಲ್ ಕೆಲಸಗಾರರ ಮಹಾ ಸಭೆ

ದ. ಕ. ಹೋಟೆಲ್ ವರ್ಕರ್ಸ್ ಯೂನಿಯನಿನ ವಾರ್ಷಿಕ ಮಹಾಸಭೆಯು ಕಳೆದ ತಾ|| 11 ರಂದು ಸಂಘದ ಆಫೀಸಿನಲ್ಲಿ ಶ್ರೀ ಎ. ಶಾಂತಾರಾಂ ಪೈಯವರ ಅಧ್ಯಕ್ಷತೆಯಲ್ಲಿ ಜರುಗಿತು.

ವಾರ್ಷಿಕ ವರದಿ ಲೆಕ್ಕಪತ್ರಗಳನ್ನು ಸಭೆ ಮಂಜೂರು ಮಾಡಿದ ಬಳಿಕ ಹೊಸ ವರುಷಕ್ಕೆ ಶ್ರೀ ಆರ್. ದಾಮೋದರ ಶೆಣೈ (ಅಧ್ಯಕ್ಷ), ಶ್ರೀ ವೇಲಾಯುಧನ್ (ಉಪಾಧ್ಯಕ್ಷ), ಕಾರ್ಯದರ್ಶಿಯಾಗಿ ಶ್ರೀ ಬಿ.ಬಿ. ಪ್ರಭು, ಜತೆ ಕಾರ್ಯದರ್ಶಿಯಾಗಿ ಶ್ರೀ ನಾರಾಯಣ ಉಡುಪ, ಕೋಶಾಧಿಕಾರಿಯಾಗಿ ಶ್ರೀ ತಿಮ್ಮಪ್ಪಯ್ಯ ಇವರು ಆರಿಸಲ್ಪಟ್ಟರು. ಸಭಿಕರ ಭಾಷಣ, ಅಧ್ಯಕ್ಷರ ಭಾಷಣಗಳ ನಂತರ ಸಭೆ ಕೊನೆಗೊಂಡಿತು.

ಪಂಚಾಯತ್ ಬೋರ್ಡು ಚುನಾವಣೆಗಳು

ಇತ್ತೀಚೆಗೆ ನಡೆದ ಕೆಲವು ಗ್ರಾಮ ಪಂಚಾಯತ್ ಚುನಾವಣೆಗಳಲ್ಲಿ ಈ ಕೆಳಗಿನವರು ಆರಿಸಿ ಬಂದಿದ್ದಾರೆ.

○ ಕೈರಂಗಳ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ರೈತಸಂಘದ ವತಿಯಿಂದ ಶ್ರೀಗಳಾದ ಕಾಶ್ಮೀರ್ ಸೋಜ, ಮತ್ತು ಮಮ್ಮಿಕುಞಿಬ್ಯಾರಿಯವರು ಆರಿಸಿ ಬಂದಿದ್ದಾರೆ.

○ ನರಿಂಗಾನ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ರೈತ ಸಂಘದ ಬೆಂಬಲದಿಂದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ಶ್ರೀ ಡೋಸೆ ಮನೆ ಈಶ್ವರ ಭಟ್ಟರೂ ರೈತಸಂಘದ ಕಾರ್ಯಕರ್ತರಾಗಿದ್ದು ಪಂಚಾಯತ್ ಸದಸ್ಯತನಕ್ಕೆ ಸ್ಪರ್ಧಿಸಿದ ಶ್ರೀಗಳಾದ ಐತಪ್ಪ ಬೆಳಾಡ್ಡ, ಮುದ್ದ (ಕಾದಿಟ್ಟ ಸ್ಥಾನ) ನಾರಾಯಣ ಶೆಟ್ಟಿ, ಮಮ್ಮಿಕುಞಿಬ್ಯಾರಿ ಇವರು ಅವಿರೋಧವಾಗಿ ಆರಿಸಿ ಬಂದಿದ್ದಾರೆ.

○ ಬಾಳೆಪುಣಿ ಗ್ರಾಮದ ಪಂಚಾಯತ್ ಚುನಾವಣೆಯಲ್ಲಿ ಬಾಳೆಪುಣಿ ರೈತಸಂಘದ ಪರವಾಗಿ ಸ್ಪರ್ಧಿಸಿದ್ದ ಶ್ರೀಮಾರ್ಗ ರಾಮಣ್ಣಶೆಟ್ಟರು ಅಧ್ಯಕ್ಷರಾಗಿಯೂ ರೈತಸಂಘದ ಕಾರ್ಯದರ್ಶಿ ಶ್ರೀ ವೆಂಕಟ್ರಮಣ ಆಚಾರ್ಯ ಜತೆ ಕಾರ್ಯದರ್ಶಿ ಶ್ರೀ ಎನ್. ಬಾಳಪ್ಪಾಳ್ವ ಮತ್ತು ಶ್ರೀಗಳಾದ ಐಮದೇವಾಡಿಗ, ನಡಿಗುತ್ತು ಸಿದ್ದಣ್ಣಶೇಖ, ಗರೋಡಿ ಮಹಮ್ಮದ್ ಬ್ಯಾರಿ ಸದಸ್ಯರಾಗಿಯೂ ಆರಿಸಿ ಬಂದಿದ್ದಾರೆ.

○ ಈರಾ—ಮಂಚಿ ಗ್ರಾಮಗಳ ಪಂಚಾಯತ್ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರೈತಸಂಘ ಬೆಂಬಲದಿಂದ ಸ್ಪರ್ಧಿಸಿದ ಶ್ರೀ ಮಿತ್ತಳ ನಾರಾಯಣ ಆಚಾರ್ಯ ಸದಸ್ಯ ಸ್ಥಾನಗಳಿಗೆ ಸ್ಪರ್ಧಿಸಿದ ಶ್ರೀ ಈರಾ ಕೆಂಜಲ ದೇವಪ್ಪಮಲ್ಲಿ, ಖಾಣೆ ಮಂಗಳೂರು ಸರ್ಕಲ್ ರೈತಸಂಘದ ಕಾರ್ಯದರ್ಶಿ ಶ್ರೀ ಈರಾ ರಾಮಪೂಜಾರಿ, ಮತ್ತು ಶ್ರೀಗಳಾದ ನೇಮುಬೆಲ್ಚಡ, ಕೊಡಂಗೆ ತಿಮ್ಮಪ್ಪಶೆಟ್ಟಿ, ಪತ್ತುಮುಡಿ ವಾಸುದೇವ ಭಟ್, ಕೃಷ್ಣಪೂಂಜ, ಸೂರಿಬೈಲು ಮೊೖದಿನೆಬ್ಯಾರಿ ಇವರು ಅವಿರೋಧವಾಗಿ ಚುನಾಯಿಸಲ್ಪಟ್ಟಿದ್ದಾರೆ.

ಕೇರಳ ಕಮ್ಯೂನಿಸ್ಟ್ ಸರಕಾರದ ಬಗ್ಗೆ ಒಂದು ಅಭಿಪ್ರಾಯ

(೩ನೇ ಪುಟದಿಂದ)

ವು ಹೋರಾಡುವುದಾಗಿ ಅವರು ಆರಂಭದಲ್ಲಿಯೇ ಸಾರಿದರು. ಜನತೆಯಲ್ಲಿ ಮೊನ್ನೆಯವರೆಗೂ "ಲೋಕಕಂಟಕ"ರೆಂದು ಗಾಬರಿಗೆ ಕಾರಣರಾದ ಕಮ್ಯೂನಿಸ್ಟರ ಕುರಿತು ಇದ್ದ ಭಯವನ್ನು ದೂರಮಾಡುವುದರಲ್ಲಿ ಸರಕಾರವು ಪೂರ್ತಿ ಯಶಸ್ವಿಯಾಗಿದೆಯೆಂದು ಹೇಳಲಾಗುತ್ತದೆ.

ಇಷ್ಟಿದ್ದರೂ ಕಮ್ಯೂನಿಸ್ಟ್ ಸರಕಾರಕ್ಕೆ ಒಂದು ನಿರಾತಂಕದ ಪರಿಸರವಿಲ್ಲ. ಸರಕಾರವು ಬಂದದ್ದೇ ಇತರ ಪಕ್ಷಗಳ ಕುರಿತಾದ ಅಸಂತೋಷ—ಸಂತಾಪದ ಫಲವಾಗಿ ಹೊರತು ತನ್ನದೇ ಆದ ಪಕ್ಷಬಲದಿಂದ ಅಲ್ಲ! ಇದನ್ನು ಅರಿತೇ ಕಮ್ಯೂನಿಸ್ಟ್ ಪಕ್ಷದ ಹಾಗೂ ವಿಧಾನ ಸಭೆಯ ಸದಸ್ಯರು ತಮ್ಮ ಮತದಾರ ಸಂಘಗಳೊಂದಿಗೆ ಹತ್ತಿರದ ಸಂಬಂಧ ಇಟ್ಟುಕೊಳ್ಳಲು ಮರೆತಿಲ್ಲ. ಈ ಸಂಬಂಧ ಕಾಂಗ್ರೆಸಿಗರಾಗಲೀ ಪ್ರಜಾಸಮಾಜವಾದಿಗಳಾಗಲೀ ನೆನಪಿಟ್ಟುಕೊಂಡದ್ದೇ ಇಲ್ಲ. ಕೇರಳದಲ್ಲಿ ಜಾತಿ ರೂಢಿಗಳ ಕಟ್ಟು ಬಿಗಿತ ಭಾರಿ ಗಟ್ಟಿ. ಇದನ್ನರಿತೇ ಕಮ್ಯೂನಿಸ್ಟ್ ಸರಕಾರ ತನ್ನ ಮಂತ್ರಿಮಂಡಳದಲ್ಲಿ ಪ್ರಾದೇಶಿಕ ಹಾಗೂ ಜಾತೀಯ ಪ್ರಾತಿನಿಧ್ಯವಿರುವಂತೆ ಬಹಳ ಗಮನಕೊಟ್ಟಿತು. ಎಲ್ಲ ವರ್ಗಗಳ ಮೆಚ್ಚಿಗೆಗಾಗಿ ಮಂತ್ರಿಗಳ ಸಂಖ್ಯೆ 11ಕ್ಕೆ ಏರಿಸಿತು. ಹಿಂದೆ ವಿರೋಧಿ ಪಕ್ಷವಾಗಿದ್ದಾಗ ಕಮ್ಯೂನಿಸ್ಟರು '5ಕ್ಕಿಂತ ಹೆಚ್ಚು ಮಂತ್ರಿಗಳು ಏಕೆ?' ಎಂದು ಟೀಕಿಸಿದ್ದುಂಟು. ಕಮ್ಯೂನಿಸ್ಟ್ ಸರಕಾರದ ತಲೆ ಕೆಡಿಸಿದ ಪ್ರಶ್ನೆ ಒಂದೇ—ಆಡಳಿತವನ್ನು ಜನತೆಯೊಂದಿಗೆ ಹೊಂದಿಸುವದು ಹೇಗೆ? ಜತೆಗೆ, ಜನತೆಯ ಸಲಹೆ ಟೀಕೆಗಳು ಸರಕಾರಕ್ಕೆ ಸಿಗುವಂತೆ ಮಾಡುವುದು ಹೇಗೆ? ಈ ನಿಟ್ಟಿನಲ್ಲಿ ಇತರ ಕಾಂಗ್ರೆಸ್ ಸರಕಾರಗಳು ನಂಬೂದ್ರಿಪಾದರಿಂದ ಪಾಠಕಲಿಯಬೇಕು.

ಗರುಡರ ಊರಿನಲ್ಲಿ ನಾಗರಪಂಚಮಿಯ ಹಬ್ಬ ಮಾಡಲು ನಂಬೂದ್ರಿಪಾದರು ಹೊರಟಂತಿದೆ. ಅವರಿಗೆ ಮೂಲತಃ ವಿರೋಧ ಕ್ರೈಸ್ತರ ಚರ್ಚಿನದು. ಹಿಂದಿನ ಕಾಂಗ್ರೆಸ್ ಸರಕಾರಕ್ಕೂ ಕ್ಯಾಥೋಲಿಕ ಧರ್ಮಸಂಸ್ಥೆ ವಿರೋಧ ಹೂಡಿತ್ತು. ಪಾಖಂಡಿ ಕಮ್ಯೂನಿಸ್ಟರೇ ಸರಕಾರ ಕಟ್ಟಿದ ಮೇಲೆ ಕೇಳಬೇಕೇ? ಸರಕಾರವು ತಂದ ಶಿಕ್ಷಣ ವಿಷಯದ ಕಾನೂನಿನ ವಿರುದ್ಧ ಕ್ಯಾಥೋಲಿಕ ಈ ವರ್ಗಗಳು ಆರಂಭಿಸಿದ ಪ್ರತಿಭಟನೆ ಉಗ್ರವಾಗಿದೆ. ಕೇರಳದ ಶಾಲೆಗಳಲ್ಲಿ ಅಭ್ಯಾಸಪತ್ರಿಕೆ ಸಿದ್ಧಪಡಿಸುವದು ಸರಕಾರ. ಆದರೆ ಬಹುಸಂಖ್ಯೆಯ ಖಾಸಗಿ ಸಂಸ್ಥೆಗಳಲ್ಲಿ—ಅವೆಲ್ಲ ಕ್ರೈಸ್ತರವೇ—ಶಿಕ್ಷಕರು ಕಡಿಮೆ ಸಂಬಳ ಪಡೆದು ಉಳಿದ ಗ್ರಾಂಟು ಹಣ ತಮ್ಮ ಚಾಲಕ ಸಂಸ್ಥೆಗೆ ಹೋಗುವಂತೆ ಮಾಡುವದು ಪರಿಪಾಠ. ಈಗ ಸರಕಾರ ನೇರವಾಗಿ ಶಿಕ್ಷಕರಿಗೆ ಸಂಬಳ ಕೊಡುವ ಹಾಗೂ ಆ ಮೊದಲು ಯೋಗ್ಯ ಶಿಕ್ಷಕರನ್ನು ಆಯಾ ಸಂಸ್ಥೆಗಳು ಸೂಚಿಸಿದ ಉಮೇದುವಾರರ ಪಟ್ಟಿಯಿಂದ ತಾನೇ ಆರಿಸುವ ಏರ್ಪಾಟು ಈ ಕಾನೂನಿನಲ್ಲಿ ಇದೆ. ಇದಕ್ಕೆ ಕ್ಯಾಥೋಲಿಕ ಧರ್ಮಸಂಸ್ಥೆಯ ಪ್ರಬಲ ವಿರೋಧ!

ಇದೇ ರೀತಿ ಕೇರಳ ಸರಕಾರದ ವಿರುದ್ಧ ವಿರೋಧಿ ಪಕ್ಷಗಳು ವಿಷಪ್ರಚಾರ ಮಾಡಲು ಅವಕಾಶ ಒದಗಿಸುವ ಇನ್ನೊಂದು ಸಂಗತಿ ಅಲ್ಲಿಯ ಬೇಸಾಯದ ಕಾನೂನು. ಈ ಕಾನೂನೇ ಕಮ್ಯೂನಿಸ್ಟ್ ಸರಕಾರದ ತತ್ವದಂತೆ ಇಲ್ಲವೇ ಇಲ್ಲ. ಇತರ ಕಾಂಗ್ರೆಸ್ ರಾಜ್ಯಗಳ ಹೊಲ ಸಾಗುವಳಿ ಕಾನೂನುಗಳನ್ನೇ ಅದು ಮೂಲತಃ ಹೋಲುತ್ತದೆ. ರೈತನು ಕ್ರಮೇಣ ಹೊಲದ ಒಡೆಯನಾಗುವ ಕ್ರಮ ಈ ಕಾನೂನಿನ ಕರಡಿನಲ್ಲಿ ಇದೆ. ಇನ್ನು ನಿಜವಾದ ಕ್ರಾಂತಿಕಾರಿಯಾದ ಹೆಜ್ಜೆ ಅಲ್ಲಿಯ ಚಹದ ತೋಟಗಳ ರಾಷ್ಟ್ರೀಕರಣವಾಗುತ್ತಿತ್ತು. ಆದರೆ ಅದಕ್ಕೆ ಸರಕಾರ ಕೈಹಾಕಿಲ್ಲ. ಘಟನಾತ್ಮಕವಾಗಿಯೂ ಹಾಕುವಂತಿಲ್ಲ. ಇನ್ನೊಂದು ಪ್ರಗತಿಪರ ಕಾನೂನು ವಿಶ್ವವಿದ್ಯಾಲಯದ್ದು. ಹೊಸ ಸರಕಾರವು ಪೋಲೀಸರಿಗೆ ಜನತೆಯ ಚಳವಳಿಗಳಲ್ಲಿ ತಾಟಸ್ಥ್ಯ ವಹಿಸಲು ಹೇಳಿದೆ. ಆದರೆ ಇದನ್ನು ಟೀಕಿಸುವ ಕಾಂಗ್ರೆಸ್ಸಿಗರೇ ಅನೇಕ ಸರಕಾರಿ ವಿರೋಧಿ, ಶಾಂತತಾ ವಿರೋಧಿ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತಾರೆ. ಸರಕಾರದ ಸತ್ವ ಪರೀಕ್ಷೆಯೇ ನಡೆದಂತಿದೆ.

ಜನರ ನಿರುದ್ಯೋಗ ನೀಗಲು ಕೇರಳಕ್ಕೆ ಬೇಕು ದೊಡ್ಡ ಉದ್ದಿಮೆಗಾರಿಕೆ, ಬಂಡವಾಳ. ಅದು ಕೇರಳದಲ್ಲಿ ಇಲ್ಲ. ಅಲ್ಲಿಯ ಜನದಟ್ಟಣೆಯ ಮಾನದಲ್ಲಿ ಕೇವಲ ಕೃಷಿಯ ವಿಕಾಸಕ್ಕೆ ಅವಕಾಶವಿಲ್ಲ. ಹೊರಗಿನ ಬಂಡವಾಳ ಅಲ್ಲಿ ತೊಡಗಲು ಕಮ್ಯೂನಿಸ್ಟ್ ಹವಾಮಾನ ಆಕರ್ಷಕವಾಗುವದಿಲ್ಲ! ಅಂದರೆ ಕಮ್ಯೂನಿಸ್ಟ್ ಸರಕಾರ ವಹಿಸಿಕೊಂಡ ಕೇರಳದ ಸಮಸ್ಯೆಗಳ ಪರಿಹಾರ ಕೇವಲ ರಾಜ್ಯಸರಕಾರದಿಂದ ಬಗೆಹರಿಸುವಂಥವೇ ಅಲ್ಲ. ಆದರೆ ತನ್ನ ಮಿತಿ ಮೇರೆಗಳಲ್ಲಿ ಈ ಸರಕಾರ ಯಶಸ್ವಿಯಾಗುತ್ತಿದೆ. ಅದು ಮಾಡಲಾರದ್ದನ್ನು ಮಾಡಲಿಲ್ಲವೆಂದು ದೂಷಿಸುವದು ತರ್ಕವಲ್ಲ. ತಿಳುವಳಿಕೆಯೂ ಅಲ್ಲ!

ಸುದ್ದಿ ಸಂಗ್ರಹ

ದಕ್ಷಿಣ ಕನ್ನಡ ಜಿಲ್ಲಾ ನೇಕಾರರ ಸಂಘದ 21ನೇ ವಾರ್ಷಿಕ ಮಹಾಸಭೆ

ದಕ್ಷಿಣ ಕನ್ನಡ ಜಿಲ್ಲಾ ನೇಕಾರರ ಸಂಘದ 21ನೇ ವಾರ್ಷಿಕ ಮಹಾ ಸಭೆಯು ತಾ. 19—5—58ನೇ ಸೋಮವಾರ ಸಂಜೆ ಘಂಟೆ 3ಕ್ಕೆ ಸರಿಯಾಗಿ ಜಪ್ಪು ಸೈಂಟ್ ಜೋನ್ಸ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಜೆ. ವೀರಪ್ಪರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಕೆ. ಪಿ. ಸಾಲ್ಯಾನರು ಸ್ವಾಗತಿಸಿದರು, ಅನಂತರ ಉಪಕಾರ್ಯದರ್ಶಿ ಶ್ರೀ ಕೆ. ಮಾರಪ್ಪನವರು ಯೂನಿಯನಿನ ವಾರ್ಷಿಕ ವರದಿಯನ್ನು ಸಭೆಯ ಮುಂದಿಟ್ಟರು. ಸದ್ರಿ ವರದಿಯು ಚರ್ಚಿಸಲ್ಪಟ್ಟು, ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಹಾಗೆಯೇ ಕೋಶಾಧಿಕಾರಿ ಶ್ರೀ ತೋಮಸ್ ಪ್ಯಾಸರಿಂದ 1957-58ನೇ ವರ್ಷದ ಲೆಖ್ಖಪತ್ರಗಳು ಸಭೆಯ ಮುಂದಿರಿಸಲ್ಪಟ್ಟು ಅಂಗೀಕರಿಸಲ್ಪಟ್ಟಿತು.

ನೇಕಾರರ ಮಜೂರಿ ಹೆಚ್ಚಳ ಮತ್ತು ಬೋನಸ್ಸಿನ ಕುರಿತು ಕಳೆದ ಅಗೋಸ್ತಿನಲ್ಲಿ ಟ್ರೈಬ್ಯೂನಲಿಗೆ ಒಪ್ಪಿಸಲ್ಪಟ್ಟ ವಿವಾದವು ಇನ್ನೂ ತೀರ್ಮಾನವಾಗದಿರುವುದನ್ನು ಖಂಡಿಸುವ ಮತ್ತು ಸರಕಾರವು ಈ ಬಗ್ಗೆ ಒಂದು ಪ್ರತ್ಯೇಕ ಟ್ರಿಬ್ಯೂನಲನ್ನು ರಚಿಸಿ ಕೂಡಲೇ ನೇಕಾರರ ಈ ನ್ಯಾಯವಾದ ಕೇಳಿಕೆಗಳನ್ನು ಕೊಡಿಸಬೇಕೆನ್ನುವ ಪ್ರಾಮುಖ್ಯವಾದ ಹಬ್ಬದ ದಿನಗಳಲ್ಲಿ ಮತ್ತು ರಾಷ್ಟ್ರೀಯ ಉತ್ಸವದ ದಿನಗಳಿಗೆ ಸಂಬಳ ಸಹಿತ ರಜೆ ಕೊಡಿಸುವ ಕಾನೂನು ಆಗಬೇಕೆನ್ನುವ. ಹತ್ತು ಜನರಿಗಿಂತ ಹೆಚ್ಚು ಮಂದಿ ಕೆಲಸ ಮಾಡುವ ಎಲ್ಲಾ ನೈಗೆ ಮತ್ತು ರಂಗಿನ ಕಾರ್ಖಾನೆಗಳಲ್ಲಿ ಕಡ್ಡಾಯವಾಗಿ "ಪ್ರೊವಿಡೆಂಟ್ ಫಂಡ್" ಸವಲತ್ತು ದೊರೆಯುವಂತಾಗಬೇಕೆನ್ನುವ, 55 ವರ್ಷ ಪ್ರಾಯವಾದ ಬಳಿಕ ಒಬ್ಬ ಮಜೂರನು ತಾನಾಗಿ ನಿವೃತ್ತಿಯನ್ನು ಅಪೇಕ್ಷಿಸಿದರೆ ಆತನಿಗೆ ಸಂಪೂರ್ಣ ಸರ್ವಿಸು ಸಂಬಳ ದೊರೆಯುವ ಕಾನೂನು ಆಗಬೇಕೆನ್ನುವ, ಕೇಂದ್ರ ಸರಕಾರವು ನಮ್ಮ ಪ್ರಾಂತ್ಯದ ನೇಕಾರರಿಗೆ ವಸತಿ ಸೌಕರ್ಯಗಳನ್ನೊದಗಿಸಲು ಮಂಜೂರು ಮಾಡಿರುವ 2 ಕೋಟಿ ರೂಪಾಯಿಗಳಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯ ಮೊದಲನೆಯ ಹಂತದೊಳಗಾಗಿಯೇ ದ. ಕ. ಜಿಲ್ಲೆಯಲ್ಲಿ ನೇಕಾರರಿಗೆ ವಸತಿ ಸೌಕರ್ಯಗಳು ದೊರಕಬೇಕೆನ್ನುವ, ಮಜೂರರ ನ್ಯಾಯವಾದ ಕೇಳಿಕೆಗಳನ್ನು ಪಡೆಯಲು ನಡೆಯಬಹುದಾದ ಮುಷ್ಕರ ಮತ್ತು ಶಾಂತ ರೀತಿಯ ನ್ಯಾಯಬದ್ಧವಾದ ಇತರ ಹೋರಾಟಗಳಲ್ಲಿ ಪೋಲೀಸ್ ಇಲಾಖೆಯವರು ಅನವಶ್ಯಕವಾಗಿ ಮಧ್ಯಪ್ರವೇಶಿಸುವ ವಿರುದ್ಧ ಒಂದು ತಡೆ ಕಾನೂನು ಜ್ಯಾರಿಯಾಗಬೇಕೆನ್ನುವ, ಪ್ರಕೃತ ನೂಲು, ಸಿಲ್ಕು, ನೂಲಿನ ರಂಗು ಮತ್ತು ಕೆಮಿಕಲ್‌ಗಳಿಗೆ ಬೆಲೆಗಳು ಬಹಳ ಏರಿರುವುದರಿಂದ ಸರಕಾರವು ಇವುಗಳ ಬೆಲೆಯನ್ನು ನಿಯಂತ್ರಿಸಿ ಇವುಗಳನ್ನು ಯೋಗ್ಯ ಬೆಲೆಗೆ ನೈಗೆ ಕೈಗಾರಿಕೆಗೆ ಒದಗಿಸಿಕೊಡಬೇಕೆನ್ನುವ, ನೇಕಾರರ ಸಹಕಾರಿ ಸಂಘಗಳ ಸದಸ್ಯರಿಗೆ ಕೈಮಗ್ಗಗಳನ್ನು ಇಟ್ಟು ಕೆಲಸ ನಡೆಸಿಕೊಂಡು ಹೋಗುವರೆ ಯೋಗ್ಯ ಕಟ್ಟಡ (ಶೆಡ್) ಗಳನ್ನು ಕೂಡಲೇ ರಾಜ್ಯ ಸರಕಾರವು ಒದಗಿಸಿಕೊಡಬೇಕೆನ್ನುವ, ಲೋಕ ಶಾಂತಿಯ ರಕ್ಷಣೆ ಮತ್ತು ಇನ್ನೊಂದು ಮಹಾಯುದ್ಧವಾಗುವುದನ್ನು ತಪ್ಪಿಸಲೋಸುಗ "ಅಣು ಬಾಂಬು, ಜಲಜನಕ ಬಾಂಬು" ಮತ್ತಿತರ ಅಣುಶಸ್ತ್ರಾಸ್ತ್ರಗಳ ಪರೀಕ್ಷಾಪ್ರಯೋಗಗಳನ್ನು ಪಾಶ್ಚಾತ್ಯರಾಷ್ಟ್ರಗಳು ಕೂಡಲೇ ನಿಲ್ಲಿಸಬೇಕೆನ್ನುವ, ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ನಡೆದುಕೊಂಡು ಬರುವ ಟೆಕ್ಸ್‌ಟೈಲ್ ಅಡ್ವೈಸರಿ ಬೋರ್ಡಿನಲ್ಲಿ ದ. ಕ. ಜಿಲ್ಲಾ ನೇಕಾರರ ಸಂಘಕ್ಕೆ ಸದ್ರಿ ಪ್ರಾತಿನಿಧ್ಯವನ್ನು ಈಗ ಅನೇಕ ವರ್ಷಗಳಿಂದ ಕೇಳುತ್ತಾ ಬಂದಿದ್ದರೂ ಕೊಡದಿರುವ ರಾಜ್ಯಸರಕಾರದ ಈ ಅಸಡ್ಡೆಯ ನೀತಿಯನ್ನು ಖಂಡಿಸುವ ಮತ್ತು ಕೂಡಲೇ ಜಿಲ್ಲಾ ನೇಕಾರರ ಸಂಘಕ್ಕೆ ಸದ್ರಿ ಪ್ರಾತಿನಿಧ್ಯ ಕೊಡಿಸಬೇಕೆನ್ನುವ ಠರಾವುಗಳು ಮಂಡಿಸಲ್ಪಟ್ಟು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು. ಈ ಠರಾವುಗಳನ್ನು ಸೂಚಿಸಿ ಮತ್ತು ಸಮರ್ಥಿಸಿ, ಶ್ರೀಗಳಾದ ಕೆ. ಮಾರಪ್ಪ, ಕೆ. ಪಿ. ಸಾಲ್ಯಾನ್, ಬಿ. ಸಿ. ಶೇಖರ, ಕೆ. ಪುರುಷೋತ್ತಮ, ಎ. ಶಾಂತಾರಾಮ ಪೈ, ಕೆ. ಮೋನಪ್ಪ ಶೆಟ್ಟಿ, ಬಿ. ರಾಮಪ್ಪ ಸುವರ್ಣ, ಡೇವಿಡ್ ಕರ್ಕಡ ಮತ್ತು ವಾಮನ ಕೊಡಿಯಾಲ್‌ಬೈಲ್ ಇವರುಗಳು ಭಾಷಣವಿತ್ತರು.

ಮುಂದಿನ ವರ್ಷದ ಆಡಳಿತಾ ಮಂಡಲಿಗೆ ಶ್ರೀಗಳಾದ ವಾಮನ ಕೊಡಿಯಾಲ್‌ಬೈಲ್ ಅಧ್ಯಕ್ಷ, ಜೆ. ವೀರಪ್ಪ ಮತ್ತು ಬಿ. ರಾಮಪ್ಪ ಸುವರ್ಣ ಉಪಾಧ್ಯಕ್ಷರುಗಳು, ಕೆ. ಪೂವಪ್ಪ ಸಾಲಿಯಾನ್ ಪ್ರಧಾನ ಕಾರ್ಯದರ್ಶಿ, ಬಿ. ಚಂದ್ರಶೇಖರ ಮತ್ತು ಕೆ. ಮಾರಪ್ಪ ಉಪಕಾರ್ಯದರ್ಶಿಗಳು, ತೋಮಸ್ ಪ್ಯಾಸ್ ಕೊಶಾಧಿಕಾರಿಯಾಗುಳ್ಳ ಒಟ್ಟು 21 ಮಂದಿಯನ್ನೊಳಗೊಂಡ ಆಡಳಿತಾ ಕಮಿಟಿಯನ್ನು ಚುನಾಯಿಸಲ್ಪಾತು. ಲಘು ಉಪಹಾರಗಳಾದ ನಂತರ ಧನ್ಯವಾದದೊಂದಿಗೆ ಸಭಾ ಮುಕ್ತಾಯವಾಯಿತು.

ದ. ಕ. ಮುನಿಸಿಪಲ್ ಅಂಡ್ ಲೋಕಲ್ ಬೋರ್ಡು ವರ್ಕರ್ಸ್ ಯೂನಿಯನಿನ ವಾರ್ಷಿಕ ಮಹಾಸಭೆ

ದ. ಕ. ಮುನ್ಸಿಪಲ್ ಅಂಡ್ ಲೋಕಲ್ ಬೋರ್ಡು ವರ್ಕರ್ಸ್ ಯೂನಿಯನಿನ 11ನೇ ವಾರ್ಷಿಕ ಮಹಾಸಭೆಯು ತಾ. 21-5-58ರಂದು ಸಂಜೆ ಮೂರು ಘಂಟೆಗೆ ಸರಿಯಾಗಿ ಗಣಪತಿ ಹೈಸ್ಕೂಲಿನಲ್ಲಿ ಶ್ರೀ ಎ. ಶಾಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಯದರ್ಶಿ ಶ್ರೀ ಕೆ. ಮೋನಪ್ಪ ಶೆಟ್ಟರು ಮುಂದಿಟ್ಟ ಗತವರ್ಷದ ವರದಿ ಮತ್ತು ಲೆಖ್ಖ ಪತ್ರಗಳನ್ನು ಸರ್ವಾನುಮತದಿಂದ ಸಭೆಯು ಅಂಗೀಕರಿಸಿತು.

ಬಳಿಕ ಸಂಬಳ, ತುಟ್ಟಿ ಭತ್ತೆ, ಮತ್ತು ಮನೆ ಬಾಡಿಗೆ ಭತ್ತೆ ಸೇರಿ ತಿಂಗಳಿಗೆ ರೂ. 55 ಸಂಬಳ ಸಿಗಬೇಕೆಂಬ ಹಿಂದಿನ ಕೇಳಿಕೆಗಳನ್ನು ನಗರಸಭೆಯು ಕೂಡಲೇ ಮಾನ್ಯ ಮಾಡ ವಂತೆ ಯೋಗ್ಯ ಕಾರ್ಯಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಅಲ್ಲದೆ, ವರ್ಷದಲ್ಲಿ 15 ದಿನಗಳ ಪೂರ್ಣ ಸಂಬಳವಿದ್ದು ರಜೆ ಸಿಗಬೇಕೆಂಬ, ಡಾಕ್ಟರರ ಸರ್ಟಿಫಿಕೇಟಿನ ಮೇಲೆ ಪೂರ್ಣ ಸಂಬಳವಿರುವ ಒಂದು ತಿಂಗಳ ಸಿಕ್ ರಜೆ ಸಿಗಬೇಕೆಂಬ, ಕೆಲಸ ಮಾಡಿಕೊಂಡಿರುವಾಗ ಅಪಘಡ ಸಂಭವಿಸಿದರೆ ಸಂಬಳ ಸಹಿತ ರಜೆ ಸಿಗಬೇಕೆಂಬ, ಪ್ರೊವಿಡೆಂಟ್ ಫಂಡಿನ ಅನುಕೂಲತೆಯನ್ನು ಎಲ್ಲಾ ಸೆನಿಟರಿ ಮತ್ತು ದೀಪ ಉರಿಸುವ ಮಜೂರರಿಗೂ ಒದಗಿಸಬೇಕೆಂಬ, ಎಲ್ಲಾ ಸೆನಿಟರಿ ಮಜೂರರಿಗೆ ಮತ್ತು ಲೈಟರರಿಗೆ ರೈನ್ ಕೋಟನ್ನು ಒದಗಿಸಿ ಕೊಡಬೇಕೆಂಬ, ಕೇಂದ್ರ ಸರಕಾರದ ಸಹಾಯ ಪಡೆದು ಎಲ್ಲಾ ಮುನಿಸಿಪಲ್ ಮಜೂರರಿಗೂ ವಸತಿಗಳನ್ನು ಕಟ್ಟಿಸಿ ಕೊಡಬೇಕೆಂಬ, ಅರ್ಧ ದಿನ ಗೈರುಹಾಜರಾದಲ್ಲಿ ಇಡೀ ದಿನ ತುಟ್ಟಿ ಭತ್ತೆ ಕಡಿತ ಮಾಡುವುದು ನಿಲ್ಲಬೇಕೆಂಬ, ಕೆಲಸ ಮಾಡದ ದಿನಗಳಿಗೆ ಮನೆ ಬಾಡಿಗೆ ಭತ್ತೆಯಲ್ಲಿ ಕಡಿತ ಮಾಡಬಾರದೆಂಬ, ಎಲ್ಲಾ ಖಾಯಂ ಕೆಲಸಗಾರರಿಗೆ ಡ್ರೆಸ್-ಮೆಟ್ಟು ಸಿಗಬೇಕೆಂಬ, ಸ್ಕೇವೆಂಜರ್ಸ್ ಮತ್ತು ಸ್ವೀಪರ್ಸ್‌ಗಳ ಸಂಖ್ಯೆ ಹೆಚ್ಚಿಸಬೇಕೆಂಬ, ನೈಟ್ ಸೋಯಿಲ್ ಡಿಪೋಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ, ಪ್ರತಿಯೊಂದು ಡಿವಿಜನಿನಲ್ಲೂ ಕೆಲಸಗಾರರ ಕೆಲಸದ ಉಪಕರಣಗಳನ್ನು ಭದ್ರವಾಗಿಡುವ ವ್ಯವಸ್ಥೆ, ಕೆಲಸಗಾರರಿಗೆ ಮೈ-ಕೈ ತೊಳೆಯುವ ವ್ಯವಸ್ಥೆ, ಮತ್ತು ಕೆಲಸಗಾರರು ಕೆಲಸದ ಸಮಯ ಉಡುಪು ವಸ್ತ್ರಗಳನ್ನಿಡುವ ವ್ಯವಸ್ಥೆಗಳಾಗಬೇಕೆಂಬ ನೈಟ್ ಸೋಯಿಲ್, ರಬ್ಬರ್ ಮತ್ತು ಯೂರಿನ್ (ಮೂತ್ರ) ಕೊಂಡೊಯ್ಯುವ ಲಾರಿಗಳ ಮತ್ತು ಮಜೂರರ ಸಂಖ್ಯೆ ಹೆಚ್ಚಿಸಬೇಕೆಂಬ, ಟ್ರೆಂಚ್ ಡಿಗ್ಗರ್ಸ್ ಮಜೂರರಿಗೂ ವಾರಕ್ಕೊಂದು ದಿನ ರಜೆ ಸಿಗಬೇಕೆಂಬ, ಎಲ್ಲಾ ಸೆನಿಟರಿ ಮತ್ತು ದೀಪ ಉರಿಸುವ ಮಜೂರರಿಗೆ ಸರಕಾರಿ ರಜಾ ದಿನದಂದು ರಜೆ ಸಿಗಬೇಕೆಂಬ, 6 ತಿಂಗಳು ಸರ್ವಿಸ್ ಮಾಡಿದ ಎಲ್ಲಾ ಮಜೂರರನ್ನು ಖಾಯಂ ಮಾಡಿ ಎಲ್ಲಾ ಅನುಕೂಲತೆಗಳನ್ನು ಒದಗಿಸಿ ಕೊಡಬೇಕೆಂಬ, ಮುನಿಸಿಪಾಲಿಟಿಯ ಮಾರ್ಕೆಟುಗಳಲ್ಲಿ ದುಡಿಯುತ್ತಿರುವ ಸೆನಿಟರಿ ಮಜೂರರಿಗೆ ಎಲ್ಲಾ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂಬ ಕೇಳಿಕೆಗಳ ಠರಾವುಗಳನ್ನು ಸಭೆಯಲ್ಲಿ ಅಂಗೀಕರಿಸಲಾಗಿದೆ.

ಮುಂದಿನ ವರ್ಷಕ್ಕೆ 21 ಮಂದಿ ಸದಸ್ಯರಿರುವ ಹೊಸ ಆಡಳಿತ ಕಮಿಟಿಯ ಚುನಾವಣೆ ನಡೆದು, ಶ್ರೀ ಎ. ಶಾಂತಾರಾಮ ಪೈ ಅಧ್ಯಕ್ಷರಾಗಿಯೂ, ಶ್ರೀಯುತರುಗಳಾದ ಕರಿಯ ಮತ್ತು ಲ್ಯಾನ್ ಬಾಡ ಉಪಾಧ್ಯಕ್ಷರುಗಳಾಗಿಯೂ, ಶ್ರೀ ಕೆ. ಮೋನಪ್ಪ ಶೆಟ್ಟಿ ಪ್ರಧಾನ ಕಾರ್ಯದರ್ಶಿಗಳಾಗಿಯೂ, ಶ್ರೀಯುತರುಗಳಾದ ಎಂ. ಓ. ನಾರಾಯಣ ರಾವ್ ಮತ್ತು ಅಪ್ಪಾವರ ಸಿಂಕ್ರ ಜತೆಕಾರ್ಯದರ್ಶಿಗಳಾಗಿಯೂ, ಶ್ರೀ ಕೆ. ಎಸ್. ತೋಮ ಕೋಶಾಧಿಕಾರಿಯಾಗಿಯೂ, ಅಧಿಕಾರಿ ಸ್ಥಾನಗಳಿಗೆ ಚುನಾಯಿಸಲ್ಪಟ್ಟಿರುವರು.

ಮುನಿಸಿಪಲ್ ಮಜೂರರ ಕೇಳಿಕೆಗಳಿಗೆ ಬೆಂಬಲ ನೀಡಿ, ಶ್ರೀ ವಾಮನ ಕೊಡಿಯಾಲ್‌ಬೈಲ್ ಮುನ್ಸಿಪಲ್ ಕೌನ್ಸಿಲರ್ ಶ್ರೀ ಎಸ್. ಗೋಪಾಲ ಸಾಲೆನ್ನ ಮುನಿಸಿಪಲ್ ಕೌನ್ಸಿಲರ್, ಮೊದಲಾದವರು ಭಾಷಣ ಮಾಡಿದರು. ಅಧ್ಯಕ್ಷರ ಭಾಷಣ, ಧನ್ಯವಾದಾರ್ಪಣೆಯೊಂದಿಗೆ ಸಭೆ ಕೊನೆಗೊಂಡಿತು.

ಸಭಾ ಪ್ರಾರಂಭದಲ್ಲಿ ಸಭಿಕರೆಲ್ಲರಿಗೂ ಲಘು ಉಪಹಾರದ ಏರ್ಪಾಡಿತ್ತು ಮತ್ತು ಸಭಿಕರೆಲ್ಲರ ಫೋಟೋ ತೆಗೆಯಲಾಯಿತು. ಸಭಾಂತ್ಯದಲ್ಲಿ 6ನೇ ಜಿಲ್ಲಾ ಮಜೂರರ ಸಮ್ಮೇಳನದ ಸಿನೇಮಾ ಪ್ರದರ್ಶನವಿತ್ತು. ಸಭೆಯಲ್ಲಿ ಮುನ್ಸಿಪಲ್ ಮಜೂರರು ಕಿಕ್ಕಿರಿದು ನೆರೆದಿದ್ದರು.

ಬೆಂಗಳೂರು—

ಕಮ್ಯೂನಿಸ್ಟ್ ಪಾರ್ಟಿಯ ಶಾಖಾ ಸಭೆ

ಬೆಂಗಳೂರು ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ನಗರ ಶಾಖೆಯ ಸಭೆಯು ತಾರೀಕು 25ನೇ ಭಾನುವಾರ ಜಿಲ್ಲಾ ಸಮಿತಿ ಆಫೀಸಿನಲ್ಲಿ ಕಾಂ| ಪಾಟೀಲ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಶಾಖೆಯು ಇದುವರೆಗೆ ನಡೆಸಿರುವ ಕಾರ್ಯಗಳ ಬ್ಗಗ್ಗೆ ಮತ್ತು ಮುಂದೆ ನಡೆಸಲಿರುವ ಕಾರ್ಯಗಳ ಬಗ್ಗೆ ವರದಿಯನ್ನು ಸಭೆಯ ಮುಂದಿಡಲಾಯಿತು. (ಕಾಮ್ರೇಡರುಗಳು) ಅದರ ಬಗ್ಗೆ ದೀರ್ಘ ಚರ್ಚೆ ನಡೆದು ಅಭಿಪ್ರಾಯ ಹಾಗೂ ಸಲಹೆಗಳನ್ನು ನೀಡಿದರು. ಮುಂದಿನ ಕೆಲಸಗಳ ಬಗ್ಗೆ ಒಂದು ಕಾರ್ಯಕ್ರಮವನ್ನು ತಯಾರಿಸಲಾಯಿತು.

ಕೊನೆಯಲ್ಲಿ ಕೆಳಗಿನ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು:

1. ದೇವೀಕುಲಂ ಉಪ ಚುನಾವಣೆಯಲ್ಲಿ ಜಯ ಗಳಿಸಿದ ಕಾಂ| ರೋಸಮ್ಮ ಪೊನ್ನೂಸ್‌ರವರಿಗೂ ಮತ್ತು ಸುಪ್ರೀಂ ಕೋರ್ಟಿನ ಮುಂದಿದ್ದ ಕೇರಳ ಸರಕಾರದ ವಿದ್ಯಾ ಮಸೂದೆಯು (ಒಂದಂಶವನ್ನು ಬಿಟ್ಟು) ಕ್ರಮಬದ್ಧವೆಂದು ಸಾರಲ್ಪಟ್ಟಿದ್ದುದಕ್ಕಾಗಿ ಕೇರಳದ ಕಮ್ಯೂನಿಸ್ಟ್ ಸರಕಾರವನ್ನೂ, ಕಮ್ಯೂನಿಸ್ಟ್ ಪಾರ್ಟಿಯನ್ನೂ ಸಭೆಯು ಅಭಿನಂದಿಸುತ್ತದೆ.

2. ಜಮ್‌ಶೆಡ್‌ಪುರದ ಉಕ್ಕಿನ ಕಾರ್ಖಾನೆಯ ಕಾರ್ಮಿಕರ ಮೇಲೆ ಗೋಲೀಬಾರು ನಡೆಸಿ ನಾಲ್ಕು ಮಂದಿ ಕಾರ್ಮಿಕರ ಕೊಲೆಗೆ ಕಾರಣರಾದ ಅಲ್ಲಿನ ಪೋಲೀಸು ಅಧಿಕಾರಿಗಳನ್ನೂ, ಕಾರ್ಖಾನೆಯ ಆಡಳಿತ ವರ್ಗವನ್ನೂ ಸಭೆಯು ಖಂಡಿಸುತ್ತದೆ. 144ನೇ ಸೆಕ್ಷನನ್ನು ಹಿಂದೆಗೆದು, ಕಾರ್ಮಿಕರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಸಭೆಯು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತದೆ.

ಬೆಂಗಳೂರು ಜಿಲ್ಲಾ ಸಮಿತಿಯು ಪಾರ್ಟಿ ನಿಧಿಗೆ ಕೊಟ್ಟಿರುವ ಕರೆಗೆ ಸಾರ್ವಜನಿಕರು ಸಹಾಯ ನೀಡಬೇಕೆಂದು ಮನವಿ ಮಾಡಿಕೊಳ್ಳಲಾಯಿತು.

ಕಮ್ಯೂನಿಸ್ಟ್ ಪಾರ್ಟಿಯ ಸಭೆಗಳು

ಚಿಕ್ಕಮಗಳೂರು

ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ತಾ. 24—5—58ನೇ ಶನಿವಾರ ಸಂಜೆ 6 ಗಂಟೆಗೆ ಚಿಕ್ಕಮಗಳೂರಿನ ಆಜಾದ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು. ಕಾಂ| ಎಂ. ವಿ. ಭಾಸ್ಕರ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರಥಮವಾಗಿ ಸ್ಥಳೀಯ ಶಾಖೆಯ ಕಾರ್ಯದರ್ಶಿಗಳಾದ ಕಾಂ| ಬಿ. ವೀರಣ್ಣನವರು ಸಭಿಕರನ್ನು ಸ್ವಾಗತಿಸಿದರು. ನಂತರ ಕೆ.ಪಿ.ಟಿ.ಯು.ಸಿ. ಕಾರ್ಯದರ್ಶಿಗಳಾದ ಕಾ| ಎಂ. ಸಿ. ನರಸಿಂಹನ್, ಎಂ.ಎಲ್.ಎ.ರವರು ಭಾಷಣ ಮಾಡಿ ಕಮ್ಯೂನಿಸ್ಟ್ ಪಾರ್ಟಿಯ ಬಗ್ಗೆ ಯಾವ ರೀತಿಯ ಅಪಪ್ರಚಾರವನ್ನು ಕಾಂಗ್ರೆಸ್‌ನವರು ನಡೆಸುತ್ತಾ ಇದ್ದಾರೆಂದೂ, ಪಾರ್ಟಿಯ ಧ್ಯೇಯ ಧೋರಣೆಗಳನ್ನೂ ಮತ್ತು ಕಮ್ಯೂನಿಸ್ಟ್ ಪಕ್ಷ ಜನತೆಯ ನಾಯಕನಾಗಿ ಮುಂದುವರಿಯುತ್ತಾ ಇದೆಯೆಂಬುದರ ಬಗ್ಗೆ ಸುದೀರ್ಘವಾದ ಭಾಷಣ ಮಾಡಿದ ನಂತರ ಜಯಘೋಷಗಳೊಂದಿಗೆ ಸಭೆ ಮುಗಿಯಿತು.

ಶಿವಮೊಗ್ಗ

ದೇವೀಕುಲಂ ಕ್ಷೇತ್ರದಿಂದ ಕಮ್ಯೂನಿಸ್ಟ್ ಸ್ಪರ್ಧಿ ಶ್ರೀಮತಿ ರೋಸಮ್ಮ ಪೊನ್ನೂಸ್‌ರವರು ವಿಜಯ ಗಳಿಸಿದ ಬಗ್ಗೆ ಸಂತೋಷ ವ್ಯಕ್ತಪಡಿಸಿ ಈ ರೀತಿ ತಿಳಿಸುತ್ತಾರೆ:

ಕಮ್ಯೂನಿಸ್ಟ್ ಸ್ಪರ್ಧಿ ಕಾಂ| ರೋಸಮ್ಮ ಪೊನ್ನೂಸ್‌ರವರನ್ನು ಪರಾಜಯಗೊಳಿಸಿ, ಕಮ್ಯೂನಿಸ್ಟ್ ಸರಕಾರವನ್ನು ಉರುಳಿಸಬೇಕೆಂದು ಪ್ರತಿಗಾಮಿಗಳು ಎಷ್ಟೋ ತಂತ್ರ ಮಾಡಿದಾಗ್ಯೂ, ಅಪಪ್ರಚಾರ ಮಾಡಿದಾಗ್ಯೂ, ದೇವೀಕುಲಂ ಮಹಾಜನತೆ, ಪ್ರತಿಗಾಮಿಗಳ ಮಾತನ್ನು ಲೆಕ್ಕಿಸದೆ, ಕಮ್ಯೂನಿಸ್ಟ್ ಪಾರ್ಟಿ ಸ್ಪರ್ಧಿಗೆ ಪ್ರಬಲವಾದ ಬೆಂಬಲ ನೀಡಿ ಬಹುಮತದಿಂದ ಆಯ್ಕೆ ಮಾಡಿರುವುದು ನಿಜವಾಗಿಯೂ ಪ್ರತಿಗಾಮಿಗಳಿಗೆ ಮತ್ತು ಅವರ ನೀತಿಗೆ ಬಲವಾದ ಕೊಡಲಿ ಪೆಟ್ಟು ಕೊಟ್ಟಂತಾಗಿದೆ ಇದು ಕೇವಲ ಕಮ್ಯೂನಿಸ್ಟ್ ಪಾರ್ಟಿಯ ವಿಜಯವಲ್ಲ, ಇಡೀ ಸಮಗ್ರ ಶ್ರಮಜೀವಿಗಳ ಪ್ರಚಂಡ ವಿಜಯವೆಂದು ನಾವು ಭಾವಿಸಿರುತ್ತೇವೆ. ದೇವೀಕುಲಂ ಮಹಾಜನತೆಗೆ ಶಿವಮೊಗ್ಗ ಜಿಲ್ಲಾ ಕಮ್ಯೂನಿಸ್ಟ್ ಪಾರ್ಟಿ ಪರವಾಗಿ ಅಭಿನಂದನೆ ಸಲ್ಲಿಸುತ್ತೇವೆ.

ಕಾಂ|| ರೋಸಮ್ಮ ಪೊನ್ನೂಸ್‌ರವರು ವಿಜಯ ಗಳಿಸಿದ ಬಗ್ಗೆ ಅಭಿನಂದಿಸಿ, ಸಂತೋಷ ವ್ಯಕ್ತಪಡಿಸಿ, ಕೇರಳ ಪ್ರಾಂತೀಯ ಕಮ್ಯೂನಿಸ್ಟ್ ಪಾರ್ಟಿ ಕಾರ್ಯದರ್ಶಿಗಳಿಗೆ ತಂತಿ ಮೂಲಕ ತಿಳಿಸಿ ಕೊಡಲ್ಪಾತು.

ತುಮುಕೂರು

ಮೋಟಾರು ಕೆಲಸಗಾರ ಸಭೆ

ತುಮುಕೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘವು ತಾ. 11-5-58ನೇ ಭಾನುವಾರ ಸಂಜೆ 5 ಗಂಟೆಗೆ ತುಮುಕೂರು ಚಾಳನಕಟ್ಟೆ ಮೈದಾನದಲ್ಲಿ ಕೆಲಸಗಾರರ ಬೇಡಿಕೆಗಳನ್ನು ಮಂಡಿಸುವ ಸಂಬಂಧದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ. ಆರ್. ಕಂಠೀರವ ಮೂರ್ತಿ ಮೂರ್ತಿಗಳು ವಹಿಸಿದ್ದರು. ವಿಧಾನ ಸಭಾ ಸದಸ್ಯರಾದ ಶ್ರೀ ಸಿ. ಜೆ. ಮುಕ್ಕಣ್ಣಪ್ಪನವರು ಮತ್ತು ತುಮಕೂರಿನ ಅಡ್ವೋಕೇಟರಾದ ಶ್ರೀ ಬಿ. ಪಿ. ಗಂಗಾಧರ, ಬಿ.ಎಸ್‌ಸಿ., ಎಲ್.ಎಲ್.ಬಿ.ಯವರೂ ಕೆಲಸಗಾರರನ್ನೂ ಸಭಿಕರನ್ನೂ ಉದ್ದೇಶಿಸಿ ಕಾರ್ಮಿಕರ ಪರವಾಗಿ ಮಾತನಾಡಿದರು. ಸಂಘದ ಕಾರ್ಯದರ್ಶಿಗಳಾದ ಕಾಂ| ಕೆ. ವಿ. ಕೃಷ್ಣಸ್ವಾಮಿಗಳು ಕೆಲಸಗಾರರ ಬೇಡಿಕೆಗಳನ್ನು ಮಂಡಿಸುತ್ತಾ, ಕೆಲಸಗಾರರ ಕಷ್ಟಗಳ ಕುರಿತು ಮಾತನಾಡಿದರು. ಬಳಿಕ ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಹಳೇಬೀಡು

ಹಿಂದುಳಿದ ಸಂಗಡದವರ ಕುಂದುಕೊರತೆ ನಿವಾರಣೆ ಯಾಗುವದೆ?

ಹಾಸನ ಜಿಲ್ಲಾ ಬಾಣಾವರದ ಹೋಬಳಿ ಬೆಂಡೆಕೆರೆ ಎಂಬ ಗ್ರಾಮದಲ್ಲಿ ಕೊರಚರು ಒಂದು ಹಟ್ಟಿಯನ್ನು ಕಟ್ಟಿಕೊಂಡಿದ್ದರು. ಇವರಿಗೆ ಸರಕಾರದವರು ಜಮೀನು ಕೊಟ್ಟಿದ್ದರು. ಇವರು ಹಗ್ಗ ವಗೈರೆ ಗೃಹ ಕೈಗಾರಿಕೆಯಿಂದ ಜೀವನ ಮಾಡುತ್ತಾ ಇದ್ದರು. ಈ ಬೆಂಡೆಕೆರೆ ಗ್ರಾಮದ ಲಿಂಗಾಯ್ತ ಕೋಮಿನವರಿಗೂ ಈ ಕೊರಚ ಜನಾಂಗದವರಿಗೂ ಹಿಂದಿನಿಂದ ವ್ಯಾಜ್ಯ ನಡೆಯುತ್ತಾ ಇದ್ದವು. ಈ ಬಾಣಾವರದ ರೇಂಜಿಗೆ ಶ್ರೀ ಗುರುಸಿದ್ದಪ್ಪನವರೆಂಬ ಪೋಲೀಸು ಸಬ್ ಇನ್ಸ್‌ಪೆಕ್ಟರರು ಬಂದರು, ಇವರು ಲಿಂಗಾಯಿತ ಕೋಮಿನವರು. ಇವರು ಸದರಿ ಕೊರಚರಿಗೆ ಉಪದ್ರ ಕೊಟ್ಟ ಕಾರಣ ಇವರು ಊರು ಬಿಟ್ಟು, ಕೋಳಗುಂದ ಮತ್ತು ಎಡತೊರೆ ತಾಲ್ಲೋಕು ಹಂಪಾಪುರಕ್ಕೆ ಹೋಗಿ ವಾಸ ಮಾಡುತ್ತಾರೆ. ಇವರು ತುಂಬು ಸಂಸಾರಿಗಳು, ಈಗಿನ ಜವಾಬ್ದಾರಿ ಸರಕಾರದಲ್ಲಿ ಹಿಂದುಳಿದ ಜನಾಂಗದವರಿಗೆ ಈ ರೀತಿ ಮಾಡಿರುವದು ತುಂಬಾ ಅನ್ಯಾಯವಾಗಿರುತ್ತೆ. ಅಧಿಕಾರಿಗಳು ತಮ್ಮ ಜನಾಂಗದವರಿಗೆ ಉತ್ತೇಜನ ಕೊಡುವುದು ಇತರೆ ಜನಾಂಗದವರಿಗೆ ತೊಂದರೆ ಕೊಡುವುದು ಧರ್ಮವಾಗಿಲ್ಲ. ಸದರಿ ಅಧಿಕಾರಿಗಳ ವಿಚಾರದಲ್ಲಿ ಇಲಾಖೆಯ ಅಧಿಕಾರಿಗಳಿಗೆ ಅನೇಕ ಅರ್ಜಿ ಬರೆದರೂ ಪ್ರಯೋಜನವಾಗಿಲ್ಲ. ಸದರಿ ಪೋಲೀಸು ಅಧಿಕಾರಿಗಳ ಮೇಲೆ ಲಂಚ ನಿರೋಧ ಶಾಖೆಯವರಿಗೂ ಅರ್ಜಿ ಬರೆದಿರುತ್ತೆ, ಪ್ರಯೋಜನವಾಗಿಲ್ಲ. ಈ ಕೊರಚರಿಗೆ ಮಾತ್ರವಲ್ಲದೆ ಉಪ್ಪಾರ ಸಂಗಡವರಿಗೂ ತೊಂದರೆ ಮಾಡಿರುತ್ತಾರೆ. ಇವರ ದುರ್ನಡತೆ ವಿಚಾರ Service Registerನಿಂದ ಗೊತ್ತಾಗುತ್ತೆ. ಏನಾದರೂ ಆಗಲಿ ಬಡವರಾದ ಕೊರಚರು ಪುನಃ ತಮ್ಮ ಸ್ಥಳಕ್ಕೆ ಬಂದು ಮಾಮೂಲಿನಂತೆ ತಮ್ಮ ಜಮೀನು ಆಬಾದು ಮಾಡಿಕೊಂಡುಹೋಗಲು ಸರಕಾರವು ಸರಿಯಾದ ಏರ್ಪಾಡು ಮಾಡಲು ಪ್ರಾರ್ಥನೆ.

ಪಂಚಾಯಿತಿ ಆಫೀಸುಗಳ ಅವ್ಯವಸ್ಥೆ

ಬೇಲೂರು ತಾಲ್ಲೋಕು ಹಳೇಬೀಡು ಹೋಬಳಿ ಸೂರನಾಯಕನ ಹಳ್ಳಿಯಲ್ಲಿ ಎರಡು ಕೋಮಿನವರಿರುತ್ತಾರೆ. ಒಂದು ಕೋಮಿನವರು ಲಿಂಗಾಯ್ತರು, ಇನ್ನೊಂದು ಕೋಮಿನವರು ಉಪ್ಪಾರರು. ಲಿಂಗಾಯ್ತರ ಪೈಕಿಯವರು ಗ್ರಾಮಾಧ್ಯಕ್ಷರು. ಉಪ್ಪಾರ ಕೋಮಿನವರು ಪಟೇಲರು. ಒಂದು ಪಾಳು ನಿವೇಶನದಲ್ಲಿ ಪಾಠ ಶಾಲೆ ಕಟ್ಟಡ ಕಟ್ಟುವ ವಿಚಾರವಾಗಿ ಉಭಯ ಜಾತಿಯವರು ವ್ಯಾಜ್ಯ ಮಾಡುತ್ತಾ ಇರುತ್ತಾರೆ. ಹಾಸನ ಸಿವಿಲ್ ಕೋರ್ಟು. ರೆವಿನ್ಯೂ ಇಲಾಖೆ ಮತ್ತು ಪೋಲೀಸು ಇಲಾಖೆಯಲ್ಲಿ ದೂರು ಕೊಟ್ಟು ತನಿಖೆ ಆಗುತ್ತಿದೆ. ಗ್ರಾಮದ ಇಬ್ಬರು ಮುಖಂಡರಿಗೂ ಆಗುತ್ತಾ ಇರುವ ವ್ಯಾಜ್ಯ. ಜನಗಳು ಮತ್ತು ಅಧಿಕಾರಿಗಳು ಬಲಪಡಿಸುತ್ತಾ ಇರುತ್ತಾರೆ ಶಿವಾಯಿ ಯಾರೂ ರಾಜಿ ಮಾಡಿಸುವ ಪ್ರಯತ್ನವನ್ನು ಮಾಡಿರುವುದಿಲ್ಲ. ಇಲ್ಲಿಯ ಸನ್ನಿವೇಶವನ್ನು ನೋಡಿದರೆ ಬಾರಿ ಹೊಡೆದಾಟವಾಗುವ ರೀತಿ ಕಾಣುತ್ತೆ. ಸಮ್ಮಂಧಪಟ್ಟ ಇಲಾಖೆಯವರಾಗಲಿ, ಕಾಂಗ್ರೆಸ್ ಮುಖಂಡರಾಗಲಿ ಉಭಯತ್ರರಿಗೂ ರಾಜಿ ಮಾಡಿಸುವದು ಸೂಕ್ತವಾಗಿದೆ.

ದೊಡ್ಡಬಳ್ಳಾಪುರ—

ಗಂಟಗಾನ ಹಳ್ಳಿಯಲ್ಲಿ ರೈತ ಸಂಘದ ಸಭೆ

ತಾ. 26-5-58ನೇ ಸೋಮವಾರ ಸಂಜೆ 8 ಘಂಟೆಗೆ ದೊಡ್ಡಬಳ್ಳಾಪುರದ ತಾಲ್ಲೂಕು ಗಂಟಗಾನಹಳ್ಳಿಯಲ್ಲಿ ಸ್ಥಳದ ರೈತ ಸಂಘದವರು ತಾಲ್ಲೂಕು ರೈತ ಸಂಘದ ಅಧ್ಯಕ್ಷರಾದ ಶ್ರೀ ಎಚ್. ಮುಗುವಾಳಪ್ಪನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಏರ್ಪಡಿಸಿದ್ದರು. ಅಧ್ಯಕ್ಷರು ಸಭೆಗೆ ದಯಮಾಡಿಸಿದ್ದ ಕೆ.ಪಿ.ಟಿ.ಯು.ಸಿ. ಉಪಾಧ್ಯಕ್ಷರಾದ ಶ್ರೀ ಎಸ್. ಸೂರ್ಯನಾರಾಯಣ ರಾಯರು ಮತ್ತು ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಶ್ರೀ ಡಿ. ವಿ. ಗಂಗಾಧರರವರನ್ನು ಪರಿಚಯ ಮಾಡಿಕೊಟ್ಟರು.

ಶ್ರೀ ಎಸ್. ಸೂರ್ಯನಾರಾಯಣ ರಾಯರು ಮಾತನಾಡುತ್ತಾ, "ಎಲ್ಲಾ ಹಳ್ಳಿಗಳಲ್ಲಿರುವಂತೆ ಇಲ್ಲಿಯೂ ಬಡತನವಿದೆ, ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವ ಚೈತನ್ಯ ರೈತನಿಗಿಲ್ಲ, ವಾಸಕ್ಕೆ ಸರಿಯಾದ ಮನೆಯಿಲ್ಲ. ಮೊದಲನೆ ಚುನಾವಣೆ ಕಾಲದಲ್ಲಿ ಹಳ್ಳಿಗಳ ಸಮಸ್ಯೆಗಳನ್ನು ಪರಿಹಾರ ಮಾಡುವ ಭರವಸೆ ಕೊಟ್ಟಿದ್ದರು, ಕಾಂಗ್ರೆಸ್ಸಿನವರು. ಎರಡನೇ ಚುನಾವಣೆಯಲ್ಲೂ ಅದೇ ಕಾಂಗ್ರೆಸ್ಸಿಗೆ ಬೆಂಬಲ ಕೊಟ್ಟಿರಿ. ಹಳ್ಳಿ ಮಾತ್ರ ಇಂಗ್ಲೀಷರ ಕಾಲದಲ್ಲಿ ಇದ್ದ ಹಾಂಗೆನೇ ಇದೆ. ಹೊನ್ನೂರಪ್ಪನವರು ಮಂಡಲ ಕಾಂಗ್ರೆಸ್ ಅಧ್ಯಕ್ಷರಾದದ್ದೂ ಆದದ್ದೆ, ಎಡಗೈಯ್ಯಲ್ಲಿ ಟೋಪಿ ಬಲಗೈಯ್ಯಲ್ಲಿ ಮೆಣಸಿನ ಕಾಯಿ ಪರ್ಮಿಟ್ಟು, ಸೊಸೈಟಿ ಹೆಸರಿನಲ್ಲಿ 50 ಸಾವಿರ ರೂಪಾಯಿ ಲಪಟಾಯಿಸಿದರು. ಸರಕಾರಕ್ಕೆ ದೂರಿನ ಮೇಲೆ ದೂರು ಕೊಟ್ಟಿರಿ, ಪೇಪರಿನಲ್ಲೆಲ್ಲಾ ಹಾಕಿಸಿದಿರಿ, ಕೇಳೋರೇ ದಿಕ್ಕಿಲ್ಲ, ಇದಕ್ಕಿನ್ನಾ ಇನ್ನೇನು ಮಾಡೋದು? ಬೀಡಕೆರೆ ಕೆರೆ ತೋಡಿ ಎತ್ತರಿಸಲು ಎಷ್ಟೋ ವರ್ಷಗಳಿಂದ ಸರ್ಕಾರದೊಂದಿಗೆ ಪ್ರಯತ್ನ ಜರುಗಿಸುತ್ತಿದ್ದೀರಿ, ಈಗ ನಿಲ್ಲುವ ನೀರಿನಲ್ಲಿ ವರ್ಷಕ್ಕೆ ಒಂದು ಬೆಳೆನೂ ಪೂರೈಸೋದಿಲ್ಲ, ಎಷ್ಟೋ ಸಾರಿ ಬೆಳೆ ಇಟ್ಟು, ಬತ್ತನೆ ಗೊಬ್ಬರ ಕೂಡಾ ಕಳಕೊಂಡಿದ್ದೀರಾ, ಕಂಟ್ರಿಬ್ಯೂಷನ್ ಹಣ ಏನೇ ಬೀಳಲಿ ಕಟ್ಟೋಕೆ ತಯಾರಿದ್ದೀರ, ನೀವು ಮೂರು ಊರಿನವರು ಬೊಬ್ಬೆ ಹಾಕತಾ ಇದ್ದೀರ ಎಷ್ಟೋ ವರ್ಷಗಳಿಂದ. ನಿಮ್ಮ ಕೆಲಸ ಆಗಲಿಲ್ಲ. ಪಾಪ ನಮ್ಮ ಹೊನ್ನೂರಪ್ಪನವರು ಪಾಳಗೆರೆಯಲ್ಲಿ ಎರಡು ಮೂರೆಕರೆಯಲ್ಲಿ ಕಬ್ಬು ಹಾಕಿದ್ದಾರೆ, ಒಳ್ಳೆ ಬೆಳೆ ತೆಗಿತಾರೆ, ದೊಡ್ಡ ಅಧಿಕಾರಿಗಳನ್ನೆಲ್ಲಾ ಕರಕೊಂಡು ಬಂದು ತೋರಿಸುತ್ತಾರೆ, ನಂದಿ ಬೆಟ್ಟದ ಮೇಲೆ ಔತಣದ ಮೇಲೆ ಔತಣ. ಅವರದೇ ರಾಜ್ಯ, ಎಂ. ವಿ. ಕೃಷ್ಣಪ್ಪನವರು, ಅವರ ನೆಂಟರು, ರಾಮೆ ಗೌಡರು ಅವರ ಸ್ನೇಹಿತರು, ಅವರೂ ಕಾಂಗ್ರೆಸ್. ಬಿಡೀ ಸ್ವಾಮಿ ಅದಕ್ಕೆ ಟೈಂ ಬರಲಿಲ್ಲ ಅಂತೀರಾ, ಅದೇನೋ ಹಿಂದೆ ಕಾಂಗ್ರೆಸ್ಸಿನೋರಿಗೆ ನಾಲ್ಕಾಣೆ ಕೊಟ್ಟಿವು. ಈಗ ಈ ರಾಮಾಂಜನಪ್ಪನವರು ನಾಲ್ಕಾಣೆ ವಸೂಲಿ ಮಾಡಿ ರೈತ ಸಂಘ ಅಂತಾರೇ. ಅಂತೂ ನಿಮ್ಮ ಕೆರೆ ತೋಡಿ ಎತ್ತರಿಸಲಿಲ್ಲ, ಇದು ಯಾರೂ ಮಾಡ್ಲೋ ಕೆಲಸವಲ್ಲ, ನೀವೆಲ್ಲಾ ಸಂಘಟಿತರಾಗಿ ಹೋರಾಟ ಮಾಡಬೇಕು, ಕಾರ್ಮಿಕರು ಎಷ್ಟೋ ವರ್ಷ ಹೋರಾಟ ನಡೆಸಿದರು. ಲಾಠಿ ಏಟುಗಳು ತಿಂದರು, ಹಾಗೆಲ್ಲಾ ಗಟ್ಟಿಯಾಗಿ ಒಗ್ಗಟ್ಟಾಗಿ ನಿಂತದ್ದರಿಂದಲೇ ಈಗ ಕೆಲವು ಅನುಕೂಲಗಳನ್ನ ಅನುಭವಿಸುತ್ತಿರುವುದು" ಎಂದು ಹೇಳಿ ಎಲ್ಲರೂ ರೈತ ಸಂಘಕ್ಕೆ ಸೇರಬೇಕೆಂದು ಕೋರಿ ಭಾಷಣ ಮುಗಿಸಿದರು. ಶ್ರೀ ಡಿ. ವಿ. ಗಂಗಾಧರರವರು ಮಾತನಾಡಿದ ನಂತರ ಶ್ರೀ ಎಸ್. ಸೂರ್ಯನಾರಾಯಣ ರಾಯರು ನಿರ್ಣಯವೊಂದನ್ನ ಸಭೆಯ್ಕುಮುಂದೆ ಮಂಡಿಸಿದರು.

ನಿರ್ಣಯ ಈ ರೀತಿಯದೆ: ಕೂಡಲೇ ಬೀಡಕೆರೆ ಕೆರೆ ತೋಡಿ ಉತಾವಣೆ ಮಾಡಬೇಕೆಂದು ಈ ಸಭೆಯು ಸರ್ಕಾರವನ್ನ ಪ್ರಾರ್ಥಿಸುತ್ತದೆ, ಒಂದು ತಿಂಗಳೊಳಗೆ ಸೂಕ್ತ ಭರವಸೆ ದೊರೆಯದಿದ್ದರೆ ಮೂರು ಗ್ರಾಮದ ರೈತರ ಜಾತಾವೊಂದು ದೊಡ್ಡಬಳ್ಳಾಪುರಕ್ಕೆ ಹೋಗಿ ತಾಲ್ಲೂಕು ಅಮಲ್ದಾರರೂ ಮತ್ತು ಅಸಿಸ್ಟೆಂಟ್ ಎಂಜನಿಯರ್‌ರವರ ಆಫೀಸಿನ ಮುಂಭಾಗದಲ್ಲಿ ವಿಷಾದ ಪ್ರದರ್ಶನ ಮಾಡತಕ್ಕದ್ದೆಂದು ಈ ಸಭೆಯು ತೀರ್ಮಾನಿಸುತ್ತದೆ. ನಿರ್ಣಯವನ್ನ ರಾಮಾಂಜನಪ್ಪನವರು ಅನುಮೋದಿಸಿ, ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಅಧ್ಯಕ್ಷರು ಮಾತನಾಡಿದ ನಂತರ ಶ್ರೀ ಅಂಜನಪ್ಪನವರು ವಂದನಾರ್ಪಣೆಯನ್ನರ್ಪಿಸಿದರು.

ಮುನಿಸಿಪಲ್ ಅಧ್ಯಕ್ಷರ ಚುನಾವಣೆ

ತಾ. 21—5—58ನೇ ಬುಧವಾರ ದೊಡ್ಡಬಳ್ಳಾಪುರದ ಮುನಿಸಿಪಲ್ ಕೌನ್ಸಿಲ್ ಅಧ್ಯಕ್ಷರ ಚುನಾವಣೆ ಜರುಗಿತು, ಹಳೆ ಕಾಂಗ್ರೆಸ್ಸಿಗರು ಶ್ರೀ ಟಿ. ಸಿದ್ದಬಸಪ್ಪನವರನ್ನ ಅಧ್ಯಕ್ಷ ಸ್ಥಾನಕ್ಕೆ ಉಮೇದುವಾರರನ್ನಾಗಿ ನಿಲ್ಲಿಸಿದರು, ಹೊಸ ಕಾಂಗ್ರೆಸ್ಸಿಗರು ತಮ್ಮಲ್ಲಿ ಯಾರನ್ನೂ ಅಧ್ಯಕ್ಷ

(೯ನೇ ಪುಟ ನೋಡಿ)

ಮುಖ್ಯ ಮಂತ್ರಿ ಜತ್ತಿಯವರಿಗೆ ಬಹಿರಂಗ ಪತ್ರ

(ಮೊದಲನೇ ಪುಟದಿಂದ)

ಧೋರಣೆಯನ್ನನುಸರಿಸುತ್ತಿದೆ. ಎಷ್ಟೋ ಕಡೆಗಳಲ್ಲಿ ಕಾಂಗ್ರೆಸ್ಸಿನ ಬೋಗಸ ಕೂಲಿಗಾರ ಸಂಘಗಳಿದ್ದರೂ, ಸರಕಾರದವರು ಅಂಥ ಸಂಸ್ಥೆಗಳಿಗೆ ಮಾನ್ಯತೆ ಕೊಡಿಸಿ, ಸರಕಾರದವರು ನೇಮಿಸುವ ಸಮಿತಿಗಳಲ್ಲೆಲ್ಲ, ಇಂಥ ಕೂಲಿಗಾರ ಸಂಘಗಳ ಪ್ರತಿನಿಧಿಗಳನ್ನೇ ನೇಮಿಸಿಕೊಂಡು, ಕೂಲಿಗಾರ ವರ್ಗಕ್ಕೆ ಅನ್ಯಾಯ ಮಾಡುತ್ತಿರುವರು. ಕೂಲಿಗಾರರಿಗೆ ನ್ಯಾಯವಾದ ಬೇಡಿಕೆ ಸಿಗುವಂಥ ಮತ್ತು ಹೆಚ್ಚಿನ ಪ್ರಾತಿನಿಧ್ಯವಿರುವ ಕೂಲಿಗಾರ ಸಂಘಗಳಿಗೆ ಮಾನ್ಯತೆ ಸಿಗುವಂಥ ಕೂಲಿಗಾರ ಧೋರಣೆಯನ್ನು ನೀವು ಅನುಸರಿಸುವಿರೆಂದು ಆಶಿಸುತ್ತೇವೆ.

● ಕರ್ನಾಟಕದಲ್ಲಿ ಬೀಡಿ, ನೇಯಿಗೆ ಮೊದಲಾದ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕೆಲಸಗಾರರ ಆರ್ಥಿಕ ಪರಿಸ್ಥಿತಿ, ಅತಿ ಹೀನಾವಸ್ಥೆಯಲ್ಲಿದೆ: ನೀವು ಜಮಖಂಡಿಯವರಾದುದರಿಂದ ಈ ದಂಧೆಗಳ ಕುರಿತು ನಿಮಗೇನೂ ಹೆಚ್ಚಿಗೆ ಹೇಳುವ ಕಾರಣವಿಲ್ಲ. ಹೊರಗಿನ ಪ್ರಾಂತಗಳ ಮೂಲಕ ಪೈಪೋಟಿ ಬಂದಾಗಿ, ಈ ಉದ್ಯೋಗಗಳಲ್ಲಿಯ ಕೆಲಸಗಾರರಿಗೆ ಹೊಟ್ಟೆ ತುಂಬ ಅನ್ನ ಸಿಗುವ ವ್ಯವಸ್ಥೆ ಮಾಡಬೇಕಾದ್ದು, ನಿಮ್ಮ ಆದ್ಯ ಕರ್ತವ್ಯವಾಗಿದೆ.

ಕರ್ನಾಟಕದ ಶಿಕ್ಷಣ ಪದ್ಧತಿಯಲ್ಲಿ ಮೂಲಭೂತ ಬದಲಾವಣೆಯಾಗಬೇಕಾಗಿದೆ. ಸದ್ಯದ ಶಿಕ್ಷಣ ಪದ್ಧತಿಯಿಂದ ನಿರುದ್ಯೋಗತನ ಬೆಳೆಯುತ್ತಿದೆ. ನಮ್ಮ ಸಮಾಜದಲ್ಲಿಯ ಈ ರೋಗ ದೂರಾಗಬೇಕಾದರೆ, ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಯಾಗಲೇಬೇಕು. ತಾಂತ್ರಿಕ, ವೈದ್ಯಕೀಯ ಮೊದಲಾದ ತರಗತಿಯ ಶಿಕ್ಷಣ ಹೆಚ್ಚಾಗಬೇಕು. ಕರ್ನಾಟಕದಲ್ಲಿ ಇಂಜಿನಿಯರ, ಓವರಸಿಯರ, ಡಾಕ್ಟರ ಮತ್ತು ಇತರ ವಿಶಿಷ್ಟ ಶಿಕ್ಷಣ ಪಡೆದ, ಪದವೀಧರರು ಬಹಳ ವಿರಳ. ಇದ್ದವರೂ ನಮ್ಮ ಪ್ರಾಂತ ಬಿಟ್ಟು ಪರಪ್ರಾಂತವನ್ನು ಸೇರಿಕೊಳ್ಳುತ್ತಿದ್ದಾರೆ. ಯಾಕೆಂದರೆ ನಮ್ಮ ಪ್ರಾಂತಕ್ಕಿಂತ ಮುಂಬಯಿ ಮೊದಲಾದ ರಾಜ್ಯಗಳಲ್ಲಿ ಇವರಿಗೆ ಹೆಚ್ಚಿಗೆ ಪಗಾರ ಸಿಗುತ್ತಿದೆ. ಆದಕಾರಣ ತಾಂತ್ರಿಕ ಶಿಕ್ಷಣದ ಪದವೀಧರರನ್ನು ತಯಾರು ಮಾಡುವ ಶಿಕ್ಷಣ ಸಂಸ್ಥೆಗಳು ಸ್ಥಾಪಿಸಲ್ಪಡಬೇಕು. ಮತ್ತು ಇಂಥ ಪದವೀಧರರಿಗೆ ಹೆಚ್ಚಿನ ಸಂಬಳ ಕೊಟ್ಟು ನಮ್ಮಲ್ಲಿಯೇ ಉಳಿಯುವಂತೆ ಆಕರ್ಷಿಸಬೇಕು.

ಯಾವದೇ ಒಂದು ರಾಜ್ಯ ಆಧುನಿಕ ರೀತಿಯಲ್ಲಿ ಮುಂದುವರಿಯಬೇಕಾದರೆ, ಕೈಗಾರಿಕೋದ್ಯಮಗಳು ಅಭಿವೃದ್ಧಿಗೊಳ್ಳಬೇಕಾದರೆ, ನಿರುದ್ಯೋಗ ಕಡಿಮೆಯಾಗಬೇಕಾದರೆ, ತಾಂತ್ರಿಕ ಪದವೀದರರ ಸಂಖ್ಯೆ ಹೆಚ್ಚಾಗಬೇಕು. ತಾಂತ್ರಿಕ ಶಿಕ್ಷಣ ಶಾಲೆಗಳು ಹೆಚ್ಚಾಗುವಂತೆ ನೀವು ಪ್ರಯತ್ನ ಮಾಡಬೇಕು.

ಕೇಂದ್ರ ಸರಕಾರದವರು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕವನ್ನು ಕಡೆಗಾಣಿಸಿದಂತೆ ಕಂಡು ಬರುತ್ತದೆ. ಹೊಸ ರೈಲ್ವೆಗಳನ್ನು ಹಾಕುವುದು, ಬಂದರಗಳನ್ನು ಅಭಿವೃದ್ಧಿಗೊಳಿಸುವುದು, ನೀರಾವರಿ-ವಿದ್ಯುತ್ ಯೋಜನೆಗಳನ್ನು ಕೈಗೊಳ್ಳುವುದು, ಉದ್ಯೋಗಗಳನ್ನು ಬೆಳೆಸುವುದು, ರಹದಾರಿ-ಸಂಪರ್ಕಗಳನ್ನು ಸುಧಾರಿಸುವುದು ಭಾರವಾದ ಉದ್ಯೋಗ ರಚಿಸುವುದು ಮೊದಲಾದ ಪ್ರಾಮುಖ್ಯ ಕೆಲಸಗಳಿಗಾಗಿ, ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಕರ್ನಾಟಕಕ್ಕೆ ಮಹತ್ವ ಕೊಟ್ಟಿಲ್ಲ. ವಿಲೀನವಾದ ಜಿಲ್ಲೆಗಳೆಲ್ಲ ಹಿಂದುಳಿದವುಗಳಾಗಿದ್ದು, ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಪಾಲು ಸಿಗುವಂತೆ ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡದಿದ್ದರೆ, ಕರ್ನಾಟಕ ಮುಂದುವರಿಯಲಿಕ್ಕೆ ಸಾಧ್ಯವೇ ಇಲ್ಲ. ಆದಕಾರಣ ಜನತೆಯನ್ನು ವಿಶ್ವಾಸದಲ್ಲಿ ತೆಗೆದುಕೊಂಡು, ಕೇಂದ್ರ ಸರಕಾರದ ಕೂಡ ಹೋರಾಡುವಿರೆಂದು ಆಶಿಸುತ್ತೇನೆ.

ಮೈಸೂರು ಸರಕಾರದವರು ಹಲವಾರು ಹೊಸ ಕರಗಳನ್ನು ಹೇರಿ ಜನತೆಗೆ ಅನ್ಯಾಯ ಮಾಡಿರುವರು. ಶಾಲೆ ಪುಸ್ತಕಗಳ ಮೇಲೆ ಕರ, ಜನತೆಯ ಜೀವನಾವಶ್ಯಕ ವಸ್ತುಗಳ ಮೇಲಿನ ಕರ, ಕಾಯಿ-ಪಲ್ಯಗಳ ಮೇಲೆ ಟರನೋವರ ಟಾಕ್ಸ್ ಮೊದಲಾದ ತೆರಿಗೆಗಳಿಂದ ಜನರಿಗೂ ಮತ್ತು ಚಿಕ್ಕ-ಪುಟ್ಟ ದಂಧೆ ಮಾಡುವವರಿಗೂ ಅತ್ಯಂತ ಅನ್ಯಾಯ ಮಾಡಿದಂತಾಗಿದೆ. ಜನರ ಮೇಲೆ ಪ್ರತ್ಯಕ್ಷ ರೀತಿಯಿಂದಾಗುತ್ತಿರುವ ಕರಗಳನ್ನು ಕಡಿಮೆ ಮಾಡುವಂತೆ ನೀವು ಪ್ರಯತ್ನ ಮಾಡಬೇಕು.

ಮೈಸೂರು ಸರಕಾರದವರು ಇಡೀ ಪ್ರಾಂತಕ್ಕೆ ಏಕರೂಪ ಪಗಾರ ಸ್ಕೇಲ್ ಮತ್ತು ತುಟ್ಟಿಭತ್ತೆ ಮಾಡಿರುವುದರಿಂದ ವಿಲೀನವಾದ ಜಿಲ್ಲೆಗಳಲ್ಲಿಯ ಸರಕಾರಿ ಮತ್ತು ಇತರ ನೌಕರದಾರರಿಗೆ, ಪೋಲೀಸರಿಗೆ, ಶಾಲೆ ಮಾಸ್ತರರಿಗೆ ಬಹಳ ಅನ್ಯಾಯ ಮಾಡಿದಂತಾಗಿದೆ. ಪಗಾರ ಸ್ಕೇಲ್ ಮತ್ತು ತುಟ್ಟಿಭತ್ತೆ ಕಡಿಮೆ ಮಾಡಲಾಗಿದೆ. ಸೀನಿಯಾರಿಟಿಯಾದಿಯಿಂದಲೂ ಅನ್ಯಾಯವಾಗಿದೆ. ಯಾವದೇ ಸರಕಾರದಲ್ಲಿ ನೌಕರರಲ್ಲಿ ಶಿಸ್ತು ಮತ್ತು ಕಾರ್ಯಕ್ಷಮತೆ ಬೆಳೆಯಬೇಕಾದರೆ, ಅವರನ್ನು ಸಂತುಷ್ಟರನ್ನಾಗಿಡಬೇಕಾಗುತ್ತದೆ. ಆದಕಾರಣ ಪಗಾರ, ತುಟ್ಟಿಭತ್ತೆ ಸೀನಿಯಾರಿಟಿಯಾದಿಯ ಕುರಿತು ನೀವು ಪುನರ್ವಿಚಾರ ಮಾಡುವುದು ಅತ್ಯಾವಶ್ಯಕ.

ಕರ್ನಾಟಕದ ಮುಂದಿರುವ ಹಲವಾರು ಪ್ರಶ್ನೆಗಳನ್ನು ನೀವು ಎಲ್ಲಾ ಪಕ್ಷಗಳ ಸಹಾಯ-ಸಹಕಾರದಿಂದ ದೂರ ಮಾಡಲಿಕ್ಕೆ ಪ್ರಯತ್ನ ಮಾಡುವಿರೆಂದು ಆಶಿಸುತ್ತೇನೆ.

ಕಮ್ಯೂನಿಸ್ಟ್ ಪಾರ್ಟಿ ಅಮೃತಸರ ಅಧಿವೇಶನ

(೫ನೇ ಪುಟದಿಂದ)

ಹಿಂದುಳಿದಿದ್ದೇವೆ. ವಿದೇಶಾಂಗ ನೀತಿಯನ್ನು ಬಲಗೊಳಿಸಲು ಮತ್ತು ಮುಂದಕ್ಕೆ ತೆಗೆದುಕೊಂಡು ಹೋಗಲು ಸಾಮೂಹಿಕ ಚಟುವಟಿಕೆ ಅಗತ್ಯವೆಂಬ ತಿಳುವಳಿಕೆ ಕಡಿಮೆ ಇದೆ.

ಈ ಪ್ರವೃತ್ತಿಗಳನ್ನು ತೊಡೆದು ಹಾಕಲು ಎಲ್ಲ ಪಾರ್ಟಿ ಘಟಕಗಳು ಯತ್ನಿಸಬೇಕು ಮತ್ತು ಶಾಂತಿ ಹೋರಾಟದಲ್ಲಿ ಪಾರ್ಟಿಯು ಸರಿಯಾದ ಪಾತ್ರವನ್ನು ನಿರ್ವಹಿಸುವಂತೆ ಮಾಡಬೇಕು.

(ಮುಂದುವರಿಯುವುದು)

ಓದುಗರ ಓಲೆ

ವಿದ್ಯುತ್ ಇಲಾಖೆಯಲ್ಲಿ ಭಾರೀ ಅವ್ಯವಸ್ಥೆ

ಮಂಗಳೂರು ನಗರದ ವಿದ್ಯುತ್ ವ್ಯವಸ್ಥೆಯು ಮೈಸೂರು ರಾಜ್ಯದ ಎಲೆಕ್ಟ್ರಿಕ್ ಬೋರ್ಡಿನ ವಶಕ್ಕೆ ಬಂದು ಸುಮಾರು ಒಂದೂವರೆ ವರುಷಗಳು ಕಳೆದುವು. ಆದರೆ ಸರಕಾರಿ ಕ್ಷೇತ್ರದಲ್ಲಿ ನಡೆಯುವ ಈ ಇಲಾಖೆಯ ಅವ್ಯವಸ್ಥೆ, ಅಸಡ್ಡೆ ಅಲಕ್ಷ್ಯಗಳು ದಿನೇದಿನೆ ಹೆಚ್ಚುತ್ತಿವೆ.

ಎಲೆಕ್ಟ್ರಿಕ್ ಬೋರ್ಡಿನ ಆಫೀಸಿನಲ್ಲಿ ಕನೆಕ್ಷನಿಗಾಗಿ ಬರುವ ಅರ್ಜಿಗಳನ್ನು ಕ್ರಮಪ್ರಕಾರ ಇಟ್ಟುಕೊಳ್ಳುವ ವ್ಯವಸ್ಥೆ ಕೂಡಾ ಇಲ್ಲವೆಂದೇ ಹೇಳಬಹುದು. ಅರ್ಜಿ ಹಾಕಿ ಎರಡು ಮೂರು ತಿಂಗಳುಗಳಾದರೂ ಉತ್ತರವೇ ಬರುತ್ತಿಲ್ಲವೆಂದೂ ನಂತರ ಆಫೀಸಿನ ತನಕ ಅರ್ಜಿದಾರನು 'ಪಾದಯಾತ್ರೆ' ಬೆಳೆಸಿ ವಿಚಾರಿಸಿದರೆ ಫೈಲಿನಲ್ಲಿ ಆ ಅರ್ಜಿಯೇ ಕಾಣದಂತಾಗುವುದೆಂದೂ ದೂರುಗಳು ಬರುತ್ತಿವೆ. ಕೊನೆಗೆ ಪದೇ ಪದೆ ಹೋಗಿ ಒತ್ತಾಯಿಸಿ ಕೊನೆಗೆ ಕನೆಕ್ಷನ್ ಕೊಡಲು ಅಂದಾಜಿಗೆ ಜನ ಬಂದು ಹೋದ ನಂತರ ಮೂರು ವಾರವಾದರೂ ಉತ್ತರ ಬರುವುದಿಲ್ಲವಂತೆ ಒಂದು ಸುದಿನದಲ್ಲಿ ಉತ್ತರ ಬಂದ ನಂತರ ಅಪೇಕ್ಷಕ ಆದರಂತೆ ಹಣ ಕಟ್ಟಿದರೆ ಪುನಃ ಮೂರು ತಿಂಗಳು ಮೌನ ಧಾರಣೆ! ಪುನಃ ಅರ್ಜಿದಾರನ ಪಾದಯಾತ್ರೆ. ಆಫೀಸಿಗೆ ಹೋಗಿ ಕೇಳಿದರೆ "ನಿಮ್ಮ ಅರ್ಜಿ ಅಲ್ಲಿ ಇದೆ" ಎಂದೂ 'ಅಲ್ಲಿ' ಹೋಗಿ ಕೇಳಿದರೆ "ಇಲ್ಲಿ ಬಂದಿಲ್ಲ ಅಲ್ಲೇ ಇರಬೇಕು!" ಎಂದು ಉತ್ತರಗಳು ಬರುವುದುಂಟಂತೆ!

ಹೇಗಾದರೂ ವಿದ್ಯುತ್ ಸಂಪರ್ಕದ ಬಗ್ಗೆ ಬೇಕಾದ 'ಪೂರ್ವ ಕ್ರಿಯೆ' ಗಳನ್ನು ಅರ್ಜಿದಾರ ಮಾಡಿ ಮುಗಿಸಿದರೆ ನಂತರದ 'ಉತ್ತರ ಕ್ರಿಯೆ'ಗಳನ್ನು ಮಾಡಲು ಇಲಾಖೆಯೊಡನೆ ಅದಕ್ಕೆ ಬೇಕಾದ ಸಪೂರ ಸರಿಗೆಯೇ ಮುಗಿದು ಹೋಗುತ್ತದೆ. ಸಪೂರ ಸರಿಗೆ ಮುಗಿದರೆ ಚಿಂತಿಲ್ಲ-ತೋರ ಸರಿಗೆಯ ಕನೆಕ್ಷನನ್ನೇ ಕೊಟ್ಟುಬಿಡಿರಿ. ಹಣ ಹೆಚ್ಚಾದರೆ ನಾವು ಕೊಡಲಿಕ್ಕೆ ಸಿದ್ಧ ಎಂದು ಅರ್ಜಿದಾರ ಹೇಳಿದರೆ ಅದಕ್ಕೆ ಪುನಃ ಪ್ರತ್ಯೇಕ 'ಎಸ್ಟಿಮೇಟು' ಆಗಬೇಕೆಂಬ ಬೆದರಿಕೆ. ಪುನಃ 'ಎಸ್ಟಿಮೇಟು' ಎಂದರೆ ಆರು ತಿಂಗಳ ಕಾಲ ಕಾಯಬೇಕೆಂದರ್ಥ.

ಹೀಗೆ ಒಂದು ಕನೆಕ್ಷನ್ ಸಿಗಲಿಕ್ಕೆ ಮೂರು ನಾಲ್ಕು ತಿಂಗಳು ಬೇಕಾಗುತ್ತದೆ. ಪಾಪ ಜನರಿಗೆ ವಿದ್ಯುತ್ ಕನೆಕ್ಷನ್ ಸಿಗುವ ಮೊದಲೇ ಆ ಇಲಾಖೆಯ ವರ್ತನೆಯಿಂದ "ಎಲೆಕ್ಟ್ರಿಕ್ ಶಾಕ್!" ಆದರೆ ಇದರರ್ಥವೇನು?

ಇನ್ನು ಈ ಮೊದಲು ಖಾಸಗಿ ಕಂಪೆನಿಯ ಕೈಕೆಳಗಿದ್ದ ನೌಕರರ ಕೆಲವು ಸವಲತ್ತುಗಳನ್ನೂ ಎಲೆಕ್ಟ್ರಿಕ್ ಬೋರ್ಡು ಕಸಿದುಕೊಂಡಿದೆ. ಈ ಮೊದಲು ಲೈನ್ ಮೇನ್‌ಗಳಿಗೆ ಕಂಪೆನಿ ಸೈಕಲ್ ಕೊಡುತಿತ್ತು. ಈಗ ಆ ಸೈಕಲ್‌ಗಳನ್ನು ಮೂಲೆಯಲ್ಲಿ ಹಾಕಿ ಲೈನ್‌ಮೇನ್‌ಗಳು ನಡೆದೇ ಹೋಗಬೇಕು ಎನ್ನಲಾಗುತ್ತಿದೆಯಂತೆ! ಎಂದರೆ ಕನೆಕ್ಷನ್ ಹಾಳಾಗಿ, ಫ್ಯೂಸ್ ಹೋಗಿ ಉಪಯೋಗಕರು ನಾಲ್ಕಾರು ಮೈಲು ದೂರದಿಂದ ಫೋನ್ ಮಾಡಿದರೆ ಅದನ್ನು ಸರಿಪಡಿಸಲು ಹೋಗುವ ಲೈನ್‌ಮೇನ್ ನಡೆದೇ ಹೋಗಬೇಕು. ಒಂದೆಡೆ ಲೈನ್ ಮೇನರಿಗೆ ತ್ರಾಸ ಇನ್ನೊಂದೆಡೆ ಜನರಿಗೆ ತ್ರಾಸ!

ಸರಕಾರಿ ಕ್ಷೇತ್ರದಲ್ಲಿರುವ ಕೈಗಾರಿಕೆಗಳು ಎಲ್ಲ ವಿಧಗಳಲ್ಲೂ ಆದರ್ಶವಾಗಿರಬೇಕು. ಕೈಗಾರಿಕೆಗಳು ಹೆಚ್ಚು ಹೆಚ್ಚಾಗಿ ಸರಕಾರಿ ಕ್ಷೇತ್ರದ ಕೈ ಕೆಳಗೆ ಬಂದರೆನೇ ಜನರಿಗೂ, ದೇಶಕ್ಕೂ ಪ್ರಯೋಜನ ಎಂದು ಜನರಿಗೆ ಪ್ರಯೋಗದಲ್ಲಿ ತಿಳಿಯುವಂತಾಗಬೇಕು. ಆದರೆ ಮೈಸೂರು ವಿದ್ಯುತ್ ಬೋರ್ಡಿನ ನೀತಿ ಇದಕ್ಕೆ ವ್ಯತಿರಿಕ್ತವಾದಂತಿದೆ. ಇನ್ನಾದರೂ ಸಂಬಂಧಪಟ್ಟವರು ಗಮನಿಸುವರೆ?

"ಷಾಕ್‌ಪ್ರೂಫ್"

ಕೆ. ಪಿ. ಟಿ. ಯು. ಸಿ. ಕಾರ್ಯಕಾರಿ ಸಮಿತಿ ಸಭೆ

ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿಯ ಸಭೆಯು ತಾ. 22—5—58 ರಂದು ಶ್ರೀ ಕೆ. ಎಸ್. ವಾಸನ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮಿತಿಯು ಪ್ರಾಂತದಲ್ಲಿ ಟ್ರೇಡ್ ಯೂನಿಯನ್ ಚಳವಳಿಯ ಪರಿಸ್ಥಿತಿಯನ್ನು, ಮುಖ್ಯವಾಗಿ ಕೆ.ಪಿ.ಟಿ.ಯು.ಸಿ.ಗೆ ಸೇರಿರುವ ಟ್ರೇಡ್ ಯೂನಿಯನ್‌ಗಳ ಪರಿಸ್ಥಿತಿಯನ್ನು ಅವಲೋಕಿಸಿ ಈ ಕೆಳಕಂಡ ನಿರ್ಣಯಗಳನ್ನು ಅನುಮೋದಿಸಿತು.

ಜೂನ್ ತಿಂಗಳ ಅಂತ್ಯದಲ್ಲಿ ಕೆ. ಜಿ. ಎಫ್ ನಲ್ಲಿ ಕೆ ಪಿ.ಟಿ.ಯು.ಸಿ ಗೆ ಸೇರಿರುವ ಸಂಘಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳನ್ನು ಆಹ್ವಾನಿಸಿ ಕಾರ್ಯಕಾರೀ ಸಮಿತಿಯ ವಿಸ್ತೃತ ಸಭೆಯನ್ನು ಕರೆಯಬೇಕೆಂದು ತೀರ್ಮಾನಿಸಲಾಯಿತು.

ಎ. ಐ. ಟಿ ಯು. ಸಿ. ಜನರಲ್ ಕೌನ್ಸಿಲ್ ಸಭೆಯನ್ನು ಬೆಂಗಳೂರು ನಗರದಲ್ಲಿ ನಡೆಸುತಂತೆ ಆಹ್ವಾನಿಸಲು ತೀರ್ಮಾನಿಸಲಾಯಿತು.

ಸಭೆಯು ಜೆಮ್‌ಷೆಡ್‌ಪುರದಲ್ಲಿ ಗೋಲೀಬಾರು, ಲಾಠಿ ಚಾರ್ಜು ಮತ್ತು ಬಂಧನಗಳಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ಗಮನಿಸಿ, ದಬ್ಬಾಳಿಕೆಯನ್ನು ಖಂಡಿಸಿ, ಸರಕಾರವು ಕೂಡಲೇ ಪ್ರವೇಶಿಸಿ, ಜೆಮ್‌ಷೆಡ್‌ಪುರ ಮಜೂರ ಯೂನಿಯನ್ ಮತ್ತು ಟಿಸ್ಕೋ ಮ್ಯಾನೇಜ್‌ಮೆಂಟಿನ ನಡುವೆ ವಿವಾದವನ್ನು ಇತ್ಯರ್ಥಗೊಳಿಸಬೇಕೆಂದು ಒತ್ತಾಯಿಸುವ, ಧೈರ್ಯದಿಂದ ಹೋರಾಟ ನಡೆಸುತ್ತಿರುವ ಉಕ್ಕಿನ ಕಾ

(೨ನೇ ಪುಟ ನೋಡಿ)

ಮುನಿಸಿಪಲ್ ಅಧ್ಯಕ್ಷರ ಚುನಾವಣೆ

(೮ನೇ ಪುಟದಿಂದ)

ಸ್ಥಾನಕ್ಕೆ ನಿಲ್ಲಿಸಲಿಲ್ಲವಾದ್ದರಿಂದ, ಮೊನ್ನೆ ತಾನೆ ಕಾಂಗ್ರೆಸ್ ಟಿಕೇಟ್ ಪಡೆದು ಮೇಲುಮನೆಗೆ ಚುನಾಯಿತರಾಗಿರುವ ಶ್ರೀ ಎಂ. ಟಿ. ಶ್ರೀಕಂಠಯ್ಯನವರು ಆದಿಯಾಗಿ ಏಳು ಜನ ಹೊಸ ಕಾಂಗ್ರೆಸ್ಸಿನವರೂ, ಆರ್.ಎಸ್.ಎಸ್. ಮುಖಂಡರಾದ ಶ್ರೀ ವಿಶ್ವನಾಥ ರಾವ್‌ರವರಿಗೆ ಮತಗಳನ್ನು ಕೊಟ್ಟಿರುವರೆಂದು ತಿಳಿದುಬಂದಿದೆ. 12 ಓಟುಗಳನ್ನು ಗಳಿಸಿ ಶ್ರೀ ಸಿದ್ಧಬಸಪ್ಪನವರು ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾಗಿದ್ದಾರೆ.

REG. No. M 6867

Edited Printed and Published by C. R. Krishna Rao, at Janashakthi Printers L—59, K. V. Temple St., Sultanpet Bangalore—2 phone 3810